# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 154 Issue: 154 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 19.12.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



BOOK YOUR ADVERTISEMENTS TO REACH MORE READERS
1,00,000+ Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಶ್ರೀಕರಿ ಆಸ್ಪತ್ರೆ SRIKARII HOSPITAL
Srikarii Hospital
Facility Available
ಅಲ್ಟ್ರಾ ಸೌಂಡ್ ULTRA SOUND | ಸಾಮಾನ್ಯ ಹೆರಿಗೆ Normal Delivery | ಗರ್ಭಕಂಠ Hysterectomy | ಲ್ಯಾಪರೋಸ್ಕೋಪಿ Laparoscopy | ಸಿಸೇರಿಯನ್ ವಿಭಾಗ Cesarean Section
ಪ್ರಸೂತಿ ತೊಂದರೆ Gynecological Problem | ಹೆಚ್ಚಿನ ಅಪಾಯದ ಗರ್ಭಧಾರಣೆ High Risk Pregnancy | ಬಂಜೆತನ ಚಿಕಿತ್ಸೆ Infertility Treatment | ಸುಸಜ್ಜಿತ IUI ಪ್ರಯೋಗಾಲಯ Highly Equipped IUI Lab
Dr. Gangothri S
MBBS DNB OBG
Dip in IVF and reproductive medicine
Fellowship in cosmetic gynaecology
and regenerative medicine
4TH WARD PATEL NAGAR HOSAPETE-583201, 08394-221456-7619476999
24 HRS Emergency Obstetrics Care
Best IVF centre



ಸುದ್ದಿ, ಜಾಹೀರಾತು ಕಚೇರಿ
ವಿಜಯನಗರ ಜಿಲ್ಲೆಯ ಸುದ್ದಿ ಜಾಹೀರಾತು ಪ್ರಕಟಣೆಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ
ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
94486 33038
Email: hampitimes@gmail.com


# ಜನರ ಕ್ಷೇಮ-ಆಯುಷ್ಮಾನ್ ಮರೆತ ಸರ್ಕಾರ!

## ಮೂಲಭೂತ ಸೌಲಭ್ಯಗಳಿಲ್ಲದೆ ಸೊರಗಿದ ಆರೋಗ್ಯ ಕೇಂದ್ರ ಕಟ್ಟಡಗಳು | ನೀರಿನತೊಟ್ಟಿ ಪಾಲಾದ ಮಾತ್ರೆಗಳು

## ವಿಷಜಂತುಗಳ ತಾಣವಾದ ಕಟ್ಟಡ | ಕಳಪೆ ಕಾಮಗಾರಿಯಿಂದ ಸೋರುತಿದೆ ಸೂರು | ಬಡವರ ಕೂಲಿ ಖಾಸಗಿ ಆಸ್ಪತ್ರೆ ಪಾಲು

**ಮಾರೇಶ ತಿಪ್ಪೇಹಳ್ಳಿ ಕೂಡ್ಲಿಗಿ**

ಗ್ರಾಮೀಣ ಜನರಿಗೆ ಆರೋಗ್ಯ ಸೇವೆ ನೀಡಬೇಕಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಗ್ರಾಮದಲ್ಲಿದ್ದರೂ ಮೂಲಭೂತ ಸೌಲಭ್ಯಗಳ ಕೊರತೆ ಹಾಗೂ ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿ, ರೋಗಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿವೆ. ದುಡಿದ ಕೂಲಿ ಹಣ ಹಿಡಿದು ಚಿಕಿತ್ಸೆಗಾಗಿ ಪಟ್ಟಣದ ಖಾಸಗಿ ಆಸ್ಪತ್ರೆಗಳತ್ತ ಬಡಜನರು ಮುಖಮಾಡುತ್ತಿದ್ದರೂ ಸಂಬಂಧಿ ಸಿದ ಅಧಿಕಾರಿಗಳು ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮಕೈಗೊಳ್ಳುತ್ತಿಲ್ಲವೇಕೆ ಎಂಬ ಪ್ರಶ್ನೆ ಗ್ರಾಮಸ್ಥರನ್ನು ಕಾಡುತ್ತಿದೆ.

ತಾಲೂಕಿನ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಕೆಂಚಮಲ್ಲನಹಳ್ಳಿ ಗ್ರಾಮದಲ್ಲಿರುವ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಹಾಗೂ ಆಯುಷ್ಮಾನ್ ಆರೋಗ್ಯ ಮಂದಿರ ಕಟ್ಟಡ ನಿರ್ಮಿಸಿ ಸುಮಾರು ಮೂರ್‍ನಾಲ್ಕು ವರ್ಷಗಳಾದರೂ, ಶೌಚಾಲಯ, ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳಿಲ್ಲ. ಜನರಿಗೆ ಸ್ವಚ್ಛತೆಯ ಪಾಠ ಹೇಳುವ ಆರೋಗ್ಯ ಇಲಾಖೆಯೇ ತನ್ನ ಕೇಂದ್ರಗಳ ಸುತ್ತ ಮುತ್ತ ಗಿಡ ಗಂಟೆಗಳು ಬೆಳೆದಿದ್ದು ಅಶುಚಿತ್ವದಿಂದ ಕೂಡಿದ್ದರೂ ಮೌನವಹಿಸಿದ್ದಾರೆ. ಆಸ್ಪತ್ರೆಯ ಆವರಣವು ಕ್ರಿಮಿಕೀಟ ಹಾಗೂ ವಿಷ ಜಂತು ಗಳ ವಾಸಸ್ಥಾನವಾಗಿದ್ದು, ಜನರು ಆಸ್ಪತ್ರೆಗೆ ಕಾಲಿಡಲು ಭಯಪಡುವಂತಾಗಿದೆ.






ಆಸ್ಪತ್ರೆಯ ಮುಂಭಾಗದಲ್ಲಿ ನಿರ್ಮಿಸಿರುವ ಕುಡಿಯುವ ನೀರು ಟ್ಯಾಂಕ್‌ನ ಕಳಪೆಯಾಗಿದ್ದು, ತೊಟ್ಟಿಗೆ ಮುಚ್ಚುವ ಬಾಗಿಲು ಸಂಪೂರ್ಣ ಮುರಿದಿದೆ. ನೀರಿನ ಟ್ಯಾಂಕಿನೊಳಗೆ ಮಳೆಯ ನೀರು, ತ್ಯಾಜ್ಯದಿಂದ ಕೂಡಿದ್ದು, ಗಬ್ಬುನಾರುತ್ತಿರುವ ಈ ನೀರಿನ ತೊಟ್ಟಿಯಲ್ಲಿಯೇ ಆಸ್ಪತ್ರೆಯ ಮಾತ್ರೆಗಳನ್ನು ಬೀಸಾಡಿರುವುದು ಇಲಾಖೆಯ ಕಾರ್ಯವೈಖರಿಗೆ ಕನ್ನಡಿಯಾಗಿದೆ. ಮನೆ ಮನೆಗೆ ತೆರಳಿ ಮನೆಯ ಆವರಣದಲ್ಲಿ, ಮನೆಯ ಮೇಲ್ಗಡೆ ನೀರು ನಿಲ್ಲದಂತೆ ಎಚ್ಚರವಹಿಸಬೇಕು ಎಂದೇ ಳುವ ಆರೋಗ್ಯ ಅಧಿಕಾರಿಗಳು, ಸಿಬ್ಬಂದಿ ತಮ್ಮ ಕಚೇರಿಯೊಳಗಿನ ಸ್ವಚ್ಛತೆಯನ್ನೇ ಮರೆತರೆ ಹೇಗೆ? ಇದರಿಂದ ಸೊಳ್ಳೆಗಳ ಸಂತಾನ ಹೆಚ್ಚಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿದೆ. ಆಸ್ಪತ್ರೆಯ ಮುಂಭಾಗ ಸರ್ಕಾರಿ ಶಾಲೆಯು ಇದ್ದು, ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಮುನ್ನ ಸಂಬಂಧಪಟ್ಟವರು ಸ್ವಚ್ಛತೆ ಹಾಗೂ ಆರೋಗ್ಯ ಕೇಂದ್ರದ ಸುಸ್ಥಿತಿಗೆ ಆದ್ಯತೆ ನೀಡಬೇಕು. ಗ್ರಾಮೀಣ ಜನರ ಆರೋಗ್ಯ, ಕ್ಷೇಮಕ್ಕಾಗಿ ಸರ್ಕಾರ ಗಮನಹರಿಸಿ ಸೂಕ್ತ ಕ್ರಮವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

> ಈ ಹಿಂದೆ ನಮ್ಮ ಗ್ರಾಮದ ಜನರು ಗರ್ಭಿಣಿ ಸ್ತ್ರೀಯರು ಮಕ್ಕಳು ಸೇರಿದಂತೆ ಆಸ್ಪತ್ರೆಗಾಗಿ ದೂರದ ಆಲೂರು ಮತ್ತು ಹೊಸಹಳ್ಳಿಗೆ ಹೋಗಿ ಚಿಕಿತ್ಸೆ ಪಡೆಯಬೇಕಾಗಿತ್ತು, ನಮ್ಮ ಗ್ರಾಮದಲ್ಲಿ ಆಸ್ಪತ್ರೆ ಇರುವುದು ಸಂತಸದ ಸುದ್ದಿ ಆದರೆ ಈ ಆಸ್ಪತ್ರೆ ನಿರ್ಮಾಣವಾಗಿ ಸುಮಾರು ವರ್ಷಗಳು ಕಳೆದರು, ಮೂಲಭೂತ ಸೌಕರ್ಯಗಳೇ ಇಲ್ಲ. ಈಗಲಾದರೂ ಇದಕ್ಕೆ ಸಂಬಂಧಪಟ್ಟವರು ಇತ್ತಕಡೆ ಗಮನ ಹರಿಸಿ, ಸರಿಪಡಿಸಿ, ಗ್ರಾಮೀಣ ಜನರ ಆರ್ಥಿಕ ಹೊರೆಯನ್ನ ತಗ್ಗಿಸಬೇಕು.
>
> – **ಕೆ.ಬಿ.ಓಬಳೇಶ್.**
> ಸಮಾಜ ಸೇವಕ, ಕೆಂಚ ಮಲ್ಲನಹಳ್ಳಿ

> ಆರೋಗ್ಯ ಇಲಾಖೆ ಮನವಿ ಪತ್ರ ಸ್ವೀಕರಿಸಲಾಗಿದೆ, ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಸಾಮಾನ್ಯ ಸಭೆಯಲ್ಲಿ ಈ ವಿಷಯಗಳ ಬಗ್ಗೆ ಚರ್ಚಿಸಿ ಒಪ್ಪಿಗೆ ನೀಡಿದ್ದಾರೆ. ಈ ವರ್ಷದ 15ನೇ ಹಣಕಾಸಿನ ಹಣ, ಬಿಡುಗಡೆ ಆದ ತಕ್ಷಣವೇ ಕಾಮಗಾರಿ ಪ್ರಾರಂಭ ಮಾಡುತ್ತೇವೆ.
>
> – **ವಿನಯ್ ಕುಮಾರ್** ಪಿಡಿಒ
> ಗ್ರಾಮ ಪಂಚಾಯಿತಿ ಆಲೂರು

> ಆರೋಗ್ಯ ಕೇಂದ್ರದ ಸುತ್ತಲು ಕಾಂಪೌಂಡ್ ನಿರ್ಮಾಣ, ಹಾಗೂ ಸೂಕ್ತ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಗ್ರಾಮ ಪಂಚಾಯತಿಗೆ ಮನವಿ ಕೊಟ್ಟಿದ್ದೇವೆ, ಕಟ್ಟಡದ ದುರಸ್ತಿಗೆ ಸಂಬಂಧಿಸಿದಂತೆ ಶಾಸಕರ ಗಮನಕ್ಕೂ ತಂದಿದ್ದೇವೆ, ಆದಷ್ಟು ಬೇಗ ಸರಿಪಡಿಸಲಾಗುವುದು.
>
> – **ಡಾ. ಎಸ್.ಪಿ.ಪ್ರದೀಪ್ ಕುಮಾರ್**
> ತಾಲೂಕು ವೈದ್ಯಾಧಿಕಾರಿಗಳು, ಕೂಡ್ಲಿಗಿ

## ಡಿ.21 ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಗ್ರಾಮೀಣ ಉಪವಿಭಾಗದ ಕಚೇರಿಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು ಡಿ.21 ರಂದು ಏರ್ಪಡಿಸಲಾಗಿದೆ ಎಂದು ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

**ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಿ**

ಹೊಸಪೇಟೆ ತಾಲೂಕಿನ ವಿದ್ಯುತ್ ಗ್ರಾಹಕರು (ಹೊಸಪೇಟೆ ನಗರ ಹೊರತು ಪಡಿಸಿ) ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.


ಹಂಪಿ ಟೈಮ್ಸ್
ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ
ಈ ದಿನದ (20-12-2024) ಚಿತ್ರಸ್ಪರ್ಧೆ
ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತು ವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ?
ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.
10ನೇ ತರಗತಿ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.
ವಾಟ್ಸ್‌ಪ್ ನಂ: 99726 03099
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
94486 33038


# ಬಳ್ಳಾರಿ ಜಿಲ್ಲೆಯಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ

## ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿಕೆ | 25 ಕೋಟಿ ರೂ ಅನುಮೋದನೆ

**ಬೆಳಗಾವಿ ಸುವರ್ಣಸೌಧ**



ಬಳ್ಳಾರಿ ಜಿಲ್ಲೆಯ ಆಲದಹಳ್ಳಿಯಲ್ಲಿ ನಬಾರ್ಡ್, ಎಚ್‌ಕೆಡಿಬಿ ನೆರವಿನೊಂದಿಗೆ ಒಣಮೆಣಸಿನಕಾಯಿ ಮಾರುಕಟ್ಟೆ ಮತ್ತು ಶೀತಲಗೃಹ ನಿರ್ಮಿಸಲು ಪ್ರಯತ್ನಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಬುಧವಾರ ವಿಧಾನಪರಿಷತ್ತಿಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ವೈ.ಎಂ. ಸತೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒಣ ಮೆಣಸಿನಕಾಯಿ ಮಾರುಕಟ್ಟೆ ನಿರ್ಮಿಸಲು 25 ಕೋಟಿ ರೂ. ವೆಚ್ಚದ ಪ್ರಸ್ತಾವನೆಗೆ ನಬಾರ್ಡ್ ಅನುಮೋದನೆ ನೀಡಿದೆ.


ಬಳ್ಳಾರಿ ಎಪಿಎಂಸಿ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು, ಎಪಿಎಂಸಿಯಿಂದಲೂ ಸ್ವಲ್ಪ ನೆರವು ನೀಡಲಾಗುವುದು. ಎಚ್‌ಕೆಡಿಬಿ ಯಿಂದಲೂ ಅನುದಾನ ಪಡೆದು ಒಣಮೆಣಸಿನಕಾಯಿ ಮಾರುಕಟ್ಟೆ ಮತ್ತು ಶೀತಲ ಗೃಹ ನಿರ್ಮಿಸಲಾಗುವುದು ಎಂದು ಹೇಳಿದರು.

ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 45 ಸಾವಿರ ಎಕರೆ ಪ್ರದೇಶದಲ್ಲಿ ಒಣಮೆಣಸಿನಕಾಯಿ ಬೆಳೆಯಲಾಗುತ್ತಿದೆ. ಮಾರುಕಟ್ಟೆ ಮತ್ತು ಶೀತಲಗೃಹ ಒಂದೇ ಕಡೆ ಇದ್ದರೆ ರೈತರಿಗೆ ಅನುಕೂಲವಾಗಲಿದೆ. ಈ ದೃಷ್ಟಿಯಲ್ಲಿ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಬಳ್ಳಾರಿ ಎಪಿಎಂಸಿಯಿಂದ ಅಲದಹಳ್ಳಿಯಲ್ಲಿ ಸುಮಾರು 23 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಈ ಜಾಗದಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆಯನ್ನು ಪಿಪಿಪಿ ಮಾಡೆಲ್‌ನಲ್ಲಿ ನಿರ್ಮಿಸಲು ಎರಡು ಬಾರಿ ಟೆಂಡರ್ ಕರೆದಿದ್ದರೂ ಯಾರೂ ಭಾಗವಹಿಸಿಲ್ಲ ಎಂದು ಪರಿಷತ್ತಿಗೆ ತಿಳಿಸಿದರು.

ಬಳ್ಳಾರಿ ಜಿಲ್ಲೆಯ ರೈತರು ಒಣಮೆಣಸಿನಕಾಯಿ ಮಾರಾಟ ಮಾಡಲು ಬ್ಯಾಡಗಿ ಮಾರುಕಟ್ಟೆಗೆ ಹೋಗಬೇಕಿದೆ. ಮಧ್ಯವರ್ತಿಗಳಿಂದಲೂ ಮೋಸಕ್ಕೀಡಾಗುತ್ತಿದ್ದಾರೆ. ಹಾಗಾಗಿ ಆಲದಹಳ್ಳಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ನಿರ್ಮಾಣವಾಗುವವರೆಗೆ ತಾತ್ಕಾಲಿಕವಾಗಿ ಬಳ್ಳಾರಿ ಎಪಿಎಂಸಿಯಲ್ಲೇ ಒಂದು ಮೆಣಸಿನಕಾಯಿ ಮಾರುಕಟ್ಟೆ ನಿರ್ಮಿಸಬೇಕು ಎಂದು ವೈ.ಎಂ.ಸತೀಶ್ ಸಚಿವರಿಗೆ ಮನವಿ ಮಾಡಿದರು.

## ಆನಂದ ಬಾಣ




# ಕೊಟ್ಟೂರಿನಲ್ಲಿ ವೃದ್ಧೆಯ ಕಣ್ಣಿಗೆ ಕೈಹಾಕಿದ ಕೋತಿ

## ಕಣ್ಣಂಚಲ್ಲಿ ಗಾಯಗೊಂಡ ವೃದ್ಧೆ | ಜನರಲ್ಲಿ ಹೆಚ್ಚಿದ ಆತಂಕ | ಕೋತಿಗಳ ದಾಳಿ ನಿಯಂತ್ರಣಕ್ಕೆ ಒತ್ತಾಯ

**ಹಂಪಿ ಟೈಮ್ಸ್ ಕೊಟ್ಟೂರು**



ಪಟ್ಟಣದಲ್ಲಿ 70 ವರ್ಷದ ವೃದ್ದೆ ಬಂಡ್ರಿ ನಿಂಗಮ್ಮನ ಮೈ ಮೇಲೆ ಮಂಗಗಳು ದಿಢೀರನೆ ದಾಳಿಮಾಡಿ ಕಣ್ಣಿನ ಕೆಳ ಭಾಗ ಪರಚಿದ್ದು, ಇಳಿ ವಯಸ್ಸಿನಲ್ಲಿ ನೊವಿನಿಂದ ಬಳಲುವ ದುಸ್ಥಿತಿ ವೃದ್ದೆಗೆ ಎದುರಾಗಿದೆ.

ಬುಧವಾರ, ವೃದ್ದೆ ನಿಂಗಮ್ಮ ತಮ್ಮ ವೃದ್ಯಾಪ ವೇತನ ಬಿಡಿಸಿಕೊಂಡು ಬರಲು ಪೋಸ್ಟ್ ಆಫೀಸ್ ಗೆ ಹೋಗುತ್ತಿದ್ದ ವೇಳೆ ಬನಶಂಕಿರಿ ದೇವಸ್ಥಾನ ರಸ್ತೆ ಬಳಿ ಮಂಗಗಳು ಏಕಾಏಕಿ ಮೈಮೇಲೆಗರಿ ಹಲ್ಲೆ ನಡೆಸಿವೆ.

ಮಂಗಗಳ ಪರಚುವಿಕೆಯಿಂದ ಅಜ್ಜಿಯ ಕಣ್ಣಿನ ಕೆಳ ಭಾಗ ರಪ್ಪೆ ಮಾತ್ರ ಕಿತ್ತಿದೆ. ಕಣ್ಣಿಗೆ ಗಾಯವಾಗಿಲ್ಲ ಎಂದು ಚಿಕಿತ್ಸೆ ವೇಳೆ ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿಗಳು ವೃದ್ದೆಯ ಮಗ ಕುಮಾರನಿಗೆ ತಿಳಿಸಿದ್ದಾರೆ.

ಈ ಭಾಗದಲ್ಲಿ ಮರಗಳು ಹೆಚ್ಚಿದ್ದು ಇವುಗಳಲ್ಲೇ ತಮ್ಮ ಆವಾಸ ಸ್ಥಾನ ಮಾಡಿಕೊಂಡು ಆಹಾರಕ್ಕಾಗಿ ನಿತ್ಯ ನೂರಾರು ಮಂಗಗಳು ಇಲ್ಲಿಯೇ ಸುತ್ತಾಡುತ್ತವೆ. ಇಲ್ಲಿನ ರಸ್ತೆಯಲ್ಲಿ ವೃದ್ದರು, ಮಕ್ಕಳು ಭೀತಿಯಿಂದ ಓಡಾಡುವ ದುಸ್ಥಿತಿ ನಿರ್ಮಾಣವಾಗಿದೆ.

ಇಲ್ಲಿನ ಜವಳೆರ ಕಣ, ಸರ್ಕಾರಿ ಆಸ್ಪತ್ರೆ ಹಾಗೂ ಬಿಎಸ್‌ಎನ್‌ಎಲ್ ಆಫಿಸ್ ಸುತ್ತಮುತ್ತ ಇರುವ ಮಂಗಗಳ ನಿಯಂತ್ರಣಕ್ಕೆ ಅರಣ್ಯ ಇಲಾಖೆಗೆ ಹಲವು ಬಾರಿ ಇಲ್ಲಿನ ವಯೋವೃದ್ದರು, ನಿವಾಸಿಗಳು ಮನವಿ ಪತ್ರ ಕೊಟ್ಟರು ಅರಣ್ಯ ಇಲಾಖೆ ನಿರ್ಲಕ್ಷಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿ ಇನ್ನೂ ಹೆಚ್ಚಿನ ಅವಘಡ ಸಂಭವಿಸುವ ಮುನ್ನ ಸಂಬಂದ ಪಟ್ಟ ಇಲಾಖೆ ಅಧಿಕಾರಿಗಳು ಈ ಬಗ್ಗೆ ಎಚ್ಚೆತ್ತು ಇಲ್ಲಿನ ಮಂಗಗಳ ನಿಯಂತ್ರಣಕ್ಕೆ ಶೀಘ್ರ ಮುಂದಾಗಬೇಕೆಂದು ಸಾರ್ವಜನಿಕರು ಆಗ್ರಹಿಸಿದರು.


ಹಂಪಿ ಟೈಮ್ಸ್

### ಮನೆ ಬಾಗಿಲು ತೆರಯಲು ಭಯ ಕೋತಿ ಹಾವಳಿಗೆ ಜನ ತತ್ತರ

ಸರ್ಕಾರಿ ಆಸ್ಪತ್ರೆ, ಥಿಯಾಸಾಫಿಕಲ್ ಲಾಡ್ಜ್, ಪ್ರವಾಸಿ ಮಂದಿರ ಬಳಿ ಹೆಚ್ಚಿದ ಮಂಗಗಳ ಹಾವಳಿ
ಹಾಲಿನ ಪ್ಯಾಕೇಟ್, ಪತ್ರಿಕೆ ಹೊತ್ತೋಯ್ದ ವಾನರಗಳು | ವಿತರಕ, ಮನೆಯವರ ನಡುವೆ ವಾಗ್ವಾದ

ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಸರ್ಕಾರಿ ಆಸ್ಪತ್ರೆ, ಥಿಯಾಸಾಫಿಕಲ್ ಲಾಡ್ಜ್ ಹಾಗೂ ಪ್ರವಾಸಿ ಮಂದಿರದ ಸುತ್ತಮುತ್ತ ಮಂಗಗಳ ಹಾವಳಿ ಹೆಚ್ಚಾಗಿದ್ದು ಈ ಭಾಗದಲ್ಲಿ ವೃದ್ಧರು, ಮಕ್ಕಳು, ಮಹಿಳೆಯರು ಭಯದಿಂದ ಓಡಾಡುವ ಸ್ಥಿತಿ ನಿರ್ಮಾಣವಾಗಿದೆ.

ಈ ಭಾಗದಲ್ಲಿ ಮನೆ ಬಾಗಿಲು ತೆರೆದು ಮುಚ್ಚಲು ಮೈ ಮರೆತರೆ, ಕ್ಷಣ ಮಾತ್ರದಲ್ಲಿ ಮಂಗಗಳು ಮನೆಯನ್ನು ಪ್ರವೇಶಿಸಿ ಮನೆಯಲ್ಲಿನ ಹಣ್ಣು,ಕಾಯಿ, ಕಾಳು-ಕಡಿಗಳನ್ನು ಹೊತ್ತುಯ್ಯುತ್ತಿವೆ. ಈ ವೇಳೆ ಇವುಗಳನ್ನು ಎದುರಿಸಲು ಹೋದರೆ, ತಿರುಗಿ ಬಾಯ್ತೆರೆದು ಮೈ ಮೇಲೆ ಎರಗಲು ಮುಂದಾಗುತ್ತವೆ ಎಂಬುದು ಅಲ್ಲಿನ ನಿವಾಸಿಗಳ ದೂರಾಗಿದೆ.

ಮಕ್ಕಳು ಹಣ್ಣು, ಬ್ರೆಡ್ ಸೇರಿದಂತೆ ಇತರೆ ತಿನ್ನುವ ಪದಾರ್ಥಗಳನ್ನು ಕೈಯಲ್ಲಿ ಇಡಿದು ಹೊರಗೆ ಬಂದರೆ, ಜಾತಕ ಪಕ್ಷಿಯಂತೆ, ಕಿಟಿಕಿ, ಕಾಂಪೌಂಡ್ ಮೇಲೆ ಕಾದು ಕುಳಿತ ಅವುಗಳು ಮಕ್ಕಳ ಕೈಯಿಂದ ಕಸಿದುಕೊಂಡು ಟಣ್ಣನೆ ಜಿಗಿಯುತ್ತವೆ. ಏನಾದ್ರು ಅಂಗಡಿಗಳಿಂದ ತರುವಾಗ ಸ್ವಲ್ಪ ಮೈಮರೆತರೆ, ವಸ್ತುಗಳು ಮಂಗಗಳ ಪಾಲಗುತ್ತವೆ. ಬರಿಕೈಯಲಿ ಮನೆಗೆ ಮರಳಬೇಕಾಗಿದೆ. ಬೆಳಗಿನ ಜಾವ ಹಾಲು, ಪೇಪರ್ ಹಾಕಿರುವುದನ್ನು ಮಂಗಗಳು ಹೊತ್ತೊಯ್ದು ಮರುದಿನ ನಿನ್ನೆ ಹಾಲು, ಪೇಪರ್ ಹಾಕಿಲ್ಲವೆಂದು ಅವರೊಂದಿಗೆ ವಾಗ್ವಾದ ನಡೆದ ಉದಾಹರಣೆಗಳು ಇಲ್ಲಿವೆ. ಪಟ್ಟಣದಲ್ಲಿ ಮಂಗಗಳು ಮತ್ತು ನಾಯಿಗಳ ಹಾವಳಿ ಹೆಚ್ಚಾಗಿದ್ದು ಮಕ್ಕಳು ಶಾಲೆಗಳಿಗೆ ಹೋಗಿ ಬರಲು ಹೆದರುತ್ತಿದ್ದಾರೆ. ಅವಘಡ ಸಂಭವಿಸುವ ಮುನ್ನ ಸಂಬಂಧ ಪಟ್ಟ ಅಧಿಕಾರಿಗಳು ಇವುಗಳ ನಿಯಂತ್ರಣಕ್ಕೆ ಕೂಡಲೇ ಮುಂದಾಗ ಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಥಿಯಾಸಾಫಿಕಲ್ ಲಾಡ್ಜ್ ಮತ್ತು ಸರ್ಕಾರಿ ಆಸ್ಪತ್ರೆ ಆವರಣದ ಮರಗಳಲ್ಲಿ ಹಿರಿ ಜೇನು ಮತ್ತು ಮಂಗಗಳ ಕಾಟ ಹೆಚ್ಚಾಗಿದ್ದು ಇವುಗಳ ನಿಯಂತ್ರಣಕ್ಕೆ ಮುಂದಾಗುವಂತೆ ಅರಣ್ಯ ಇಲಾಖೆಗೆ ಹಲವು ಬಾರಿ ಪತ್ರ ಬರೆದರು ಯಾವೊಬ್ಬ ಅಧಿಕಾರಿಯು ಇತ್ತ ತಿರುಗಿ ನೋಡಿಲ್ಲ. ಅರಣ್ಯ ಇಲಾಖೆ ಪಪಂ ಮೇಲೆ, ಪ.ಪಂ. ಅವರು ಅರಣ್ಯ ಇಲಾಖೆ ಮೇಲೆ ತಮ್ಮದಲ್ಲವೆನ್ನುವಂತೆ ಒಬ್ಬರ ಮೇಲೊಬ್ಬರು ಹೇಳುವುದಾಗಿದೆ. ಇನ್ಯಾರಿಗೆ ದೂರಬೇಕು?
– ಮಹಾಂತಪ್ಪ
ಥಿಯಾಸಾಫಿಕಲ್ ಲಾಡ್ಜ್ ಸದಸ್ಯರು, ಕೊಟ್ಟೂರು.

ಪಟ್ಟಣದಲ್ಲಿ ಕಳೆದ ತಿಂಗಳು 8-9 ಮಂಗಗಳನ್ನು ಈಗಾಗಲೇ ಹಿಡಿದಿದ್ದೇವೆ, ಕೆಲವು ಸಿಕ್ಕಿರಲಿಲ್ಲ. ಪಪಂ ಅಧಿಕಾರಿಗಳೊಂದಿಗೆ ಚರ್ಚಿಸಿ,ಪಟ್ಟಣ ಪಂಚಾಯತಿ ಅವರು ಹಿಡಿಯುವ ಖರ್ಚು ಭರಿಸಿದರೆ ತಜ್ಞರನ್ನು ಕರಸಿ, ಉಳಿದ ಮಂಗಗಳನ್ನು ಹಿಡಿಯಲು ಮುಂದಾಗುವೆವು.
– ವೆಂಕಟೇಶ್.
ಉಪವಲಯ ಅರಣ್ಯ ಅಧಿಕಾರಿ, ಕೂಡ್ಲಿಗಿ.

24 Sep 2024 - Page 4-powerd by webgauge

> ಕೊಟ್ಟೂರು ಪಟ್ಟಣದಲ್ಲಿ ಸೆಪ್ಟೆಂಬರಯಿಂದ ಡಿಸೆಂಬರ್ 18 ರ ವರೆಗೆ ಮಂಗಗಳ ದಾಳಿಗೆ 6 ಪ್ರಕರಣಗಳು ಆಸ್ಪತ್ರೆಯಲ್ಲಿ ದಾಖಲಾಗಿವೆ. ಇಂದು 70 ರ ವಯಸ್ಸಿನ ನಿಂಗಮ್ಮಗೆ ಕಣ್ಣಿನ ಕೆಳಗಡೆ ಮುಖಕ್ಕೆ ಪರಚಿವೆ.
>
> – **ಡಾ.ಪಿ.ಬದ್ಯಾನಾಯ್ಕ್**
> ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ ಕೊಟ್ಟೂರು.

> ನಾವು ಕೂಲಿಕಾರ್ಮಿಕರು, ನಮ್ಮ ತಾಯಿ ನಿಂಗಮ್ಮನ ಮೇಲೆ ಮಂಗಗಳು ದಾಳಿ ನಡೆಸಿ ಕಣ್ಣಿನ ಕೆಳಗೆ ಗಾಯ ಮಾಡಿವೆ, ತಾಯಿ ಇಳಿ ವಯಸ್ಸಿನವರು. ನಮಗೆ ಆರ್ಥಿಕ ತೊಂದರೆ ಯಲ್ಲಿದ್ದೇವೆ. ಕಣ್ಣಿಗೆ ಏನಾದಿತು ಎಂಬ ಭಯ ನಮ್ಮನಾವರಿಸಿದೆ.
>
> – **ಬಂಡ್ರಿ ಕುಮಾರ,** ನಿಂಗಮ್ಮನ ಪುತ್ರ, ಕೊಟ್ಟೂರು




## ಸ್ಟುಡೆಂಟ್ ಕಾಲಂ

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ



ಪ್ರಕೃತಿಗೂ ಮಾನವನಿಗೂ ಗಾಢವಾದ ಸಂಬಂದವಿದೆ. ಮಾನವ ಪ್ರಕೃತಿಯಲ್ಲೇ ಹುಟ್ಟಿ ಪ್ರಕೃತಿಯಲ್ಲೇ ಬದುಕಿ ಕೊನೆಗೆ ಪ್ರಕೃತಿಯಲ್ಲೇ ಮಣ್ಣಾಗಿ ಹೋಗುತ್ತಾನೆ. ತನಗೆ ಬೇಕಾದ ಎಲ್ಲವನ್ನು ಪ್ರಕೃತಿಯಿಂದಲೇ ಪಡೆಯುತ್ತಾನೆ. ಆದ್ದರಿಂದಲೇ ಪ್ರಕೃತಿಯನ್ನು 'ಪ್ರಕೃತಿಮಾತೆ' ಎಂದು ಕರೆಯುತ್ತೇವೆ. ಆದರೆ ಮಹಾಸ್ವಾರ್ಥಿಯಾದ ಮನುಷ್ಯನಿಂದ ಇಂದು ಗ್ರಾಮ, ನಗರ ಸೇರಿದಂತೆ ಸಂಪೂರ್ಣ ಪರಿಸರ ಮಲಿನವಾಗಿ, ಪರಿಸರ ನಾಶದೊಂದಿಗೆ ತನ್ನ ವಿನಾಶವನ್ನು ಹತ್ತಿರ ತಂದುಕೊಳ್ಳುತ್ತಿದ್ದಾನೆ. ಇಂತಹ ಪರಿಸ್ಥಿತಿ ಹೀಗೆ ಮುಂದುವರೆದರೆ ನಮ್ಮ ಸರ್ವನಾಶ ನಮ್ಮ ಕಣ್ಣೆದುರೇ ನಡೆಯುದರಲ್ಲಿ ಯಾವುದೇ ಅನುಮಾನವಿಲ್ಲ. ಇದು ನಡೆಯಬಾರದೆಂದರೆ ವಿದ್ಯಾರ್ಥಿಗಳಾದ ನಾವು ಪರಿಸರ ಸಂರಕ್ಷಣೆಯ ಮಹತ್ವಕಾರ್ಯದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಬೇಕು.



ನಿಸರ್ಗದ ಜೊತೆ ಬೆರತು ಬಾಳಿದರೆ ಪರಿಸರದ ಉಳಿವಿಕೆಗೆ ಪೂರಕವಾಗುವ ವಿಷಯಗಳ ಬಗ್ಗೆ ನಮ್ಮ ಸಾಮಾನ್ಯಜ್ಞಾನ ತಾನಾಗಿಯೇ ಬೆಳೆಯುತ್ತದೆ. ಇದಕ್ಕೆ ನಾವು ಮಾಡಬೇಕಾಗುವುದು ಇಷ್ಟೇ. ನಮ್ಮ ಶಾಲೆ, ಮನೆ ಸೇರಿದಂತೆ ಸುತ್ತಲಿನ ಪರಿಸರವು ಮಲಿನವಾಗದಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಮತ್ತು ಸಮುದಾಯದ ಸಹಾಯ ಪಡೆದು ವಿದ್ಯಾರ್ಥಿಗಳ ಸಂಘಗಳ ಮೂಲಕ ಜನರಲ್ಲಿ ಪರಿಸರ ಸಂರಕ್ಷಣೆಯ ಅರಿವನ್ನು ಮೂಡಿಸಬೇಕು. ತಮ್ಮ ಶಾಲಾ ಆವರಣದಲ್ಲಿ ಮಾಲಿನ್ಯ ಉಂಟುಮಾಡುವ ಪ್ಲಾಸ್ಟಿಕ್, ಮೇಲಿನ ನೀರು ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕು. ವಿದ್ಯಾರ್ಥಿಗಳು ಸ್ವತಃ ತಾವೇ ಶಾಲೆಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಧಿಸಿದಂತೆ ಪ್ರಬಂಧ, ಭಾಷಣ, ಚಿತ್ರಕಲಾ. ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಪರಿಸರ ಸಂರಕ್ಷಣೆಯ ಅರಿವು ಮೂಡಿಸಬೇಕು. ಪರಿಸರ ದಿನಾಚರಣೆಯಂದು ವಿದ್ಯಾರ್ಥಿಗಳು ತಮ್ಮ ಮನೆ, ಗ್ರಾಮ ಮತ್ತು ಶಾಲೆಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸಬೇಕು.

ಇನ್ನು ಇತ್ತೀಚಿನ ವರ್ಷಗಲ್ಲಿ ಪ್ಲಾಸ್ಟಿಕ್‌ನಿಂದ ಸಾಕಷ್ಟು ಪರಿಸರ ಮಾಲಿನ್ಯವಾಗುತ್ತಿದೆ. ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಕ್ಯಾನ್ಸರ್ ರೋಗವು ಬರುತ್ತದೆ. ಪ್ಲಾಸ್ಟಿಕ್‌ನ ಸೃಷ್ಟಿ ಮತ್ತು ಮರುಬಳಕೆ ಎರಡು ಸಹ ವಿಷಕಾರಿ ಅನಿಲಗಳನ್ನು ಉತ್ಪದಿಸುತ್ತದೆ. ಪ್ಲಾಸ್ಟಿಕ್ ಬಳಕೆಯಿಂದ ಗಾಳಿ, ನೀರು ಮತ್ತು ಭೂಮಾಲಿನ್ಯವಾಗುತ್ತವೆ. ಪ್ಲಾಸ್ಟಿಕ್ ಬಳಕೆ ಮಾಡಿ ಎಸೆದಗಾ ಪ್ರಾಣಿ–ಪಕ್ಷಿಗಳು ಆ ಪ್ಲಾಸ್ಟಿಕ್‌ನ್ನು ತಿಂದು ಸಾಯುತ್ತವೆ. ಪ್ಲಾಸ್ಟಿಕ್ ಭೂಮಿಯಲ್ಲಿ ಕೊಳೆಯಲು 400ಕ್ಕಿಂತ ಹೆಚ್ಚಿನ ವರ್ಷ ತೆಗೆದುಕೊಳ್ಳುತ್ತದೆ. ಇದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಹಾಗಾಗಿ ನಿತ್ಯವೂ ನಾವು ಬಳಸುವ ಪ್ಲಾಸ್ಟಿಕ್‌ಗೆ ಕಡಿವಾಣ ಹಾಕುವ ಮೂಲಕ ಪರಿಸರ ಸಂರಕ್ಷಣೆ ಮಾಡೋಣವೇ?

**– ಸಂಧ್ಯಾ ಎಂ.ಎಂ. 8ನೇ ತರಗತಿ.**
**ಸರ್ಕಾರಿ ಪ್ರೌಢಶಾಲೆ ಬಸರಕೋಡು, ಹಗರಿಬೊಮ್ಮನಹಳ್ಳಿ(ತಾ)**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಅಥ್ಲೆಟಿಕ್ಸ್‌ನ ಭರವಸೆಯ ಆಶಾಕಿರಣ.... ಮೇಘ ಮುನವಳ್ಳಿಮಠ

ಕಳೆದ ವಾರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟದಲ್ಲಿ 400 ಮೀಟರ್ ಹರ್ಡಲ್ಸ್ ವಿಭಾಗದಲ್ಲಿ ಮತ್ತು 400 ಮೀಟರ್ ಓಟದಲ್ಲಿ ಎರಡೆರಡು ದಾಖಲೆಗಳನ್ನು ನಿರ್ಮಿಸಿದ ಗದುಗಿನ ಪ್ರಭು ರಾಜೇಂದ್ರ ಶಾರೀರಿಕ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕುಮಾರಿ ಮೇಘ ಮುನವಳ್ಳಿಮಠ ಉತ್ತರ ಕರ್ನಾಟಕದ ಅಥ್ಲೆಟಿಕ್ ಕ್ರೀಡೆಯ ಭರವಸೆಯ ಕ್ರೀಡಾಪಟುವಾಗಿ ಹೊರಹೊಮ್ಮಿದ್ದಾರೆ.

ಇತ್ತೀಚೆಗೆ ಧಾರವಾಡದ ಆರ್ ಎನ್ ಶೆಟ್ಟಿ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟದಲ್ಲಿ 400 ಮೀಟರ್ ಹರ್ಡಲ್ಸ್ ವಿಭಾಗದಲ್ಲಿ ಕೇವಲ 1:00:08

ಸಮಯದಲ್ಲಿ ಓಡಿ ಈ ಹಿಂದಿನ(1:03) ದಾಖಲೆಯನ್ನು ಅಳಿಸಿ ಹಾಕಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ ಮೇಘ ಮರುದಿನ ನಡೆದ 400 ಮೀಟರ್ ಓಟದ ಸ್ಪರ್ಧೆಯಲ್ಲಿ ಕೇವಲ 55 ಸೆಕೆಂಡುಗಳಲ್ಲಿ ಓಡಿ ಈ ಹಿಂದಿನ ದಾಖಲೆ (58ಸೆಕೆಂಡ್)ಯನ್ನು ಮುರಿದು ಹೊಸ ದಾಖಲೆಯನ್ನು ಸೃಷ್ಟಿಸಿ ಚಿನ್ನದ ಪದಕವನ್ನು ಪಡೆದಿದ್ದು ಅಥ್ಲೆಟಿಕ್ ಕ್ಷೇತ್ರದಲ್ಲಿ ಸಂಚಲನವನ್ನು ಸೃಷ್ಟಿಸಿದ್ದಾಳೆ.

ಮೂಲತಹ ಗದಗ ಜಿಲ್ಲೆಯ ಮುಂಡರಗಿಯ ನಿವಾಸಿಯಾಗಿರುವ ಮೇಘ ಮುನವಳ್ಳಿ ಮಠ ಕರಾಟೆಯಲ್ಲಿ ಬ್ಲಾಕ್ ಬೆಲ್ಟ್ ಮಾಡಿಕೊಂಡಿದ್ದು ಹೈಸ್ಕೂಲಿನಲ್ಲಿದ್ದಾಗ ಕ್ರೀಡೆಯಲ್ಲಿ ತೊಡಗಿಸಿಕೊಂಡಳು. ಮುಂದೆ ಪಿಯುಸಿಗೆ ಧಾರವಾಡದ ಜೆಎಸ್‌ಎಸ್ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಆಯ್ದುಕೊಂಡ ಆಕೆ ವೃತ್ತಿಪರ ಅಥ್ಲೆಟಿಕ್ ತರಬೇತಿಯನ್ನು ಕೋಚ್ ಶಾಮಲಾ ಪಾಟೀಲ್ ಅವರ ಬಳಿ ಪಡೆದಳು. ಒಂದು ವರ್ಷದ ಕಠಿಣ ತರಬೇತಿಯ ನಂತರ ಆಕೆ ಮೊದಲ ಬಾರಿಗೆ ರಾಜ್ಯಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿ ಯುನಿವರ್ಸಿಟಿ ಬ್ಲೂ ಎಂದು ಘೋಷಿಸಲ್ಪಟ್ಟಳು, 2019 ರಲ್ಲಿ ಆಳ್ವಾಸ್ ಕಾಲೇಜಿನಲ್ಲಿ ನಡೆದ ಅಖಿಲ ಭಾರತೀಯ ಅಂತರ ವಿಶ್ವವಿದ್ಯಾಲಯಗಳ ರಾಷ್ಟ್ರೀ ಯ ಅಥ್ಲೆಟಿಕ್ ಕ್ರೀಡಾ ಕೂಟ ದಲ್ಲಿ ಭಾಗವಹಿಸಿ ದಳು.




ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಪ್ರತಿದಿನ ಮುಂಜಾನೆ ಮತ್ತು ಸಾಯಂಕಾಲ ಮೂರರಿಂದ ನಾಲ್ಕು ಗಂಟೆಗಳ ಕಾಲ ಕಠಿಣ ತರಬೇತಿಯಲ್ಲಿ ತೊಡಗಿಸಿಕೊಳ್ಳುವ ಮೇಘ

ಓಟದ ಪ್ರಾಕ್ಟೀಸ್ನ ಜೊತೆ ಜೊತೆಗೆ, ಸ್ಟ್ರೆಂತ್ ವರ್ಕೌಟ್ ಗಳನ್ನು ಕೂಡ ನುರಿತ ತರಬೇತುದಾರರ ಅಡಿಯಲ್ಲಿ ನಿರ್ವಹಿಸುತ್ತಿದ್ದು ಕಳೆದ ಐದಾರು ವರ್ಷಗಳಿಂದ ಉತ್ತಮ ಪ್ರದರ್ಶನ ತೋರುತ್ತಿರುವ ಮೇಘ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಲಿ ಎಂಬುದು ಆಕೆಯ ಎಲ್ಲ ಬೆಂಬಲಿಗರ ಆಶಯ.






ಹಲವಾರು ರಾಜ್ಯಮಟ್ಟದ ಪ್ರಶಸ್ತಿ ಪದಕಗಳನ್ನು ತನ್ನ ಮುಡಿಗೇರಿಸಿಕೊಂಡಿರುವ ಮೇಘಾಳ ತನ್ನ ಶ್ರದ್ಧೆ ಮತ್ತು ಗಮನವನ್ನು 400 ಮೀಟರ್ ಓಟ ಮತ್ತು 400 ಮೀಟರ್ ಹರ್ಡಲ್ಸ್ ನಲ್ಲಿ ಇರಿಸಿ ಸತತ ಪ್ರಯತ್ನ ಜಾರಿಯಲ್ಲಿಟ್ಟಳು. ರಾಜ್ಯ ಮತ್ತು ರಾಷ್ಟ್ರಮಟ್ಟದ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್ಶಿಪ್‌ನಲ್ಲಿ ಭಾಗವಹಿಸಿದ ಆಕೆ ನಾನೂರು ಮೀಟರ್ ಹರ್ಡಲ್ಸ್ ನಲ್ಲಿ ಆರನೇ ಸ್ಥಾನವನ್ನು ಮತ್ತು 400 ಮೀಟರ್ ಓಟದಲ್ಲಿ ಎಂಟನೇ ಸ್ಥಾನವನ್ನು ಪಡೆದುಕೊಂಡಳು.

ಈ ಹಿಂದೆ ನಾನೂರು ಮೀಟರ್ ಹರ್ಡಲ್ಸ್ ನಲ್ಲಿ ಆಕೆಯ ಅತ್ಯುತ್ತಮ ಸಮಯ 1.03 ಸೆಕೆಂಡ್ ಗಳಾಗಿದ್ದರೆ ಇದೀಗ ಕೇವಲ ಒಂದು ನಿಮಿಷದಲ್ಲಿ ಆಕೆ ಈ ದೂರವನ್ನು ಕ್ರಮಿಸಿದ್ದಾಳೆ. 400 ಮೀಟರ್ ಓಟದಲ್ಲಿ ಈ ಹಿಂದೆ ಆಕೆಯ ದಾಖಲೆಯ ಸಮಯ 57 ಸೆಕೆಂಡ್ ತೆಗೆದುಕೊಳ್ಳುತ್ತಿದ್ದು ಇದೀಗ 55 ಸೆಕೆಂಡ್ ನಲ್ಲಿ ಯಾಕೆ ಗುರಿಯನ್ನು ತಲುಪುತ್ತಿದ್ದು ಈ ಮೂಲಕ ಆಕೆ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಮಿಂಚುವ ಎಲ್ಲ ಭರವಸೆಗಳನ್ನು ಹೊಂದಿರುವ ಕ್ರೀಡಾಪಟುವಾಗಿ ಹೊರಹೊಮ್ಮಿದ್ದಾಳೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ತಾನು ಗುರುತಿಸಿಕೊಂಡು ಒಲಂಪಿಕ್ ಕ್ರೀಡಾಕೂಟಗಳಲ್ಲಿ ಭಾಗವಹಿಸಬೇಕು ಎಂಬುದು ಆಕೆಯ ಆಶಯವಾಗಿದೆ. ಕಳೆದ ಹಲವಾರು ವರ್ಷಗಳಿಂದ ದಸರಾ ಕ್ರೀಡಾಕೂಟಗಳಲ್ಲಿ ಭಾಗವಹಿಸುತ್ತಿರುವ ಮೇಘಾಳ ಪ್ರಯತ್ನ ಹುಸಿ ಹೋದದ್ದಿಲ್ಲ. 200 ಮೀಟರ್, 400 ಮೀಟರ್ ಮತ್ತು 4*100 ಮೀಟರ್ ರಿಲೇ ಸ್ಪರ್ಧೆಗಳಲ್ಲಿ ಸತತವಾಗಿ ಭಾಗವಹಿಸುತ್ತಿರುವ ಆಕೆ ಒಂದಲ್ಲ ಒಂದು ಪದಕಗಳನ್ನು ಗಳಿಸಿರುವುದು ಆಕೆಯ ಹೆಗ್ಗಳಿಕೆ. ಕಳೆದ ಎರಡು ವರ್ಷಗಳಿಂದ ಆಕೆ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರೂ ಆರು ಮತ್ತು ಎಂಟನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಗಿದೆ. ತನ್ನ ಓಟದ ವೇಗವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಅವಶ್ಯಕವಾದ ತರಬೇತಿಗೆ ಮತ್ತು ಒಳ್ಳೆಯ ದೈಹಿಕ ಚೈತನ್ಯವನ್ನು ಪಡೆಯಲು ಅಗತ್ಯವಾದ ಪೋಷಕಾಂಶಗಳುಳ್ಳ ಆಹಾರ ಸೇವನೆಗೆ ಆಕೆಗೆ ಸಾಕಷ್ಟು ಹಣದ ಅವಶ್ಯಕತೆ ಇದ್ದು ಆಕೆಗೆ ಕಳೆದ 5 ವರ್ಷಗಳಿಂದ ಮುಂಡರಗಿಯ ಚೈತನ್ಯ ಶಿಕ್ಷಣ ಸಂಸ್ಥೆಯು ಆಕೆಗೆ ಸಹಾಯ ಹಸ್ತವನ್ನು ಚಾಚಿದೆ.

ತಂದೆ ರೇವಣಸಿದ್ದಯ್ಯ ಎಕ್ಸ್ ಮಿಲಿಟರಿ ಸರ್ವಿಸ್ ಮ್ಯಾನ್ ಆಗಿದ್ದು ಇದೀಗ ನಿವೃತ್ತಿಯ ನಂತರ ಹತ್ತಿರದ ಶುಗರ ಫ್ಯಾಕ್ಟರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಯಿ ಶಾರದಾ ಗೃಹಿಣಿಯಾಗಿದ್ದು ಸೋದರಿ ಮಂದಾರ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ತಮ್ಮೆಲ್ಲ ತೊಂದರೆಗಳ ನಡುವೆಯೂ ಮಗಳ ಕ್ರೀಡಾಸಕ್ತಿಗೆ ನೀರೆರೆಯುತ್ತಿರುವ ಪಾಲಕರು ಆಕೆಗೆ ಎಲ್ಲ ರೀತಿಯ ಸಹಾಯ ಸಹಕಾರಗಳನ್ನು ನೀಡುತ್ತಿರುವುದು ಆಕೆಗೆ ಆತ್ಮಸ್ಥೈರ್ಯವನ್ನು ತಂದು ಕೊಟ್ಟಿದೆ. ಗಾಯದ ಸಮಸ್ಯೆಯಿಂದಲೂ ಒಂದಷ್ಟು ಬಾರಿ ನರಳಿದ ಮೇಘ ಆರೋಗ್ಯ ಸುಧಾರಿಸಿದ ಮೇಲೆ ಮತ್ತೆ ಪುನಶ್ಚೇತನ ಶಿಬಿರಗಳಿಗೆ ಹಾಜರಾಗಿ ತನ್ನ ತರಬೇತಿಯನ್ನು ಮುಂದುವರೆಸಿ ಈ ಹಂತವನ್ನು ತಲುಪಿದ್ದಾಳೆ.

ಮುಂದಿನ ತಿಂಗಳಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವ ಮೇಘ ಮುನವಳ್ಳಿಮಠ ತನ್ನ ಅತ್ಯುತ್ತಮ ಪ್ರಯತ್ನವನ್ನು ಮುಂದುವರೆಸಿ ವಿಜಯಮಾಲೆಯನ್ನು ಧರಿಸಲಿ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿಜಯ ದುಂದುಭಿಯನ್ನು ಮೊಳಗಿಸಲಿ, ಇನ್ನಷ್ಟು ಪದಕಗಳಿಗೆ ಕೊರಳೊಡ್ಡಲಿ ಎಂಬ ಆಶಯದೊಂದಿಗೆ.

# ಬಡತನಕ್ಕೆ ಸೌಂದರ್ಯ ಮತ್ತು ಸಂತಾನ ಜಾಸ್ತಿ ಹಗ್ಗದ ಮೇಲಣ ಸ್ವತಂತ್ರ ಬದುಕಿನ ಯಶೋಗಾಥೆ

ಬದುಕು ಅದೆಷ್ಟು ಘೋರತರ ಎಂದರೆ..? ಕಲ್ಪನೆಗೂ ಮೀರಿದ, ಸಾಧ್ಯ – ಅಸಾಧ್ಯತೆಗಳ ಆಗರ, ಅದರ ಆಳ – ಹರವು ತಿಳಿದವರಾರು..? ಎಲ್ಲರೂ ತಮ್ಮ ತಮ್ಮ ಕಾಲ ಮೇಲೆ ನಿಂತುಕೊಳ್ಳಬೇಕು, ಬದುಕಿನಲ್ಲಿ ನೆಲೆಗೊಳ್ಳಬೇಕೆಂದು ಕನಸು ಹೊತ್ತು, ಕಾಲಿಗೆ ಚಕ್ರ ಕಟ್ಟಿಕೊಂಡು ಓಡುವವರೇ ಹೆಚ್ಚು, ಅದೊಂದು ಹುಚ್ಚು ಎನ್ನಬಹುದೇನೋ..?

ನಾವು ನಮ್ಮ ನಿತ್ಯ ಜೀವನದಲ್ಲಿ ಸಾಮಾನ್ಯವಾಗಿ ಒಬ್ಬರ ಮೇಲೊಬ್ಬರು ದೂರುತ್ತಾ ಕೂರುತ್ತೇವೆ. ನಾನು ಯಾಕಾದರೂ ನಿನ್ನ ಹೊಟ್ಟೆಯಲ್ಲಿ ಹುಟ್ಟಿದೆನೋ..! ನಾನು ಅನಿಲ್ ಅಂಬಾನಿ.., ಮುಖೇಶ್ ಅಂಬಾನಿ.., ಅಂಥವರ ಹೊಟ್ಟೆಯಲ್ಲಿ ಹುಟ್ಟಿದ್ದರೆ ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡಬಹುದಿತ್ತು, ಎಂದು ತಮಗೊದಗಿದ ಕಿತ್ತು ತಿನ್ನುವ ಬಡತನಕ್ಕೆ, ಹೆತ್ತು–ಹೊತ್ತ ಮುಗ್ಧ ತಂದೆ–ತಾಯಂದಿರುಗಳಿಗೆ ಹಿಡಿಶಾಪ ಹಾಕುವವರೇ ಹೆಚ್ಚು..! ಸಿರಿತನದ ಉಪ್ಪರಿಗೆಯಲ್ಲಿರುವವರು ಹೊಟ್ಟೆ ತುಂಬ ಊಟ, ಕಣ್ಣುಂಬ ನಿದ್ದೆ ಬಾರದ ದಿನಗಳನ್ನೆಷ್ಟು..? ಕಳೆದಿರುತ್ತಾರೆ ಎಂಬುದನ್ನು ನಾವು ಯಾರೂ ಕೂಡ ಯೋಚಿಸುವುದಿಲ್ಲ.




ಡಾ ಯಲ್ಲಮ್ಮ ಕೆ.
ಮಲಪನಗುಡಿ ಹೊಸಪೇಟೆ

Scan For Digital Colourful
HAMPI TIMES E-paper

ಬದುಕೆಂಬುದು ಯಾರ..? ಬಾಳಿನಲ್ಲೂ ಹೂವಿನ ಹಾಸಿಗೆಯಾಗಿರುವುದಿಲ್ಲ; ಹಾಗಂತ ಮುಳ್ಳಿನ ಹಾಸಿಗೆಯೂ ಅಲ್ಲ..! ನಾವು ಬದುಕನ್ನು ಹೇಗೆ..? ಕಟ್ಟಿಕೊಳ್ಳುತ್ತೇವೆ ಎಂಬುದರ ಮೇಲೆ ಅದು ನಿಂತಿರುತ್ತದೆ.

ನೆಲದ ಮೇಲಣದ ಬದುಕಲ್ಲಿ 'ಅ'ಭದ್ರತೆಯ ಭಯ ನಮ್ಮನ್ನು ಬಿಡದೇ ಕಾಡುತ್ತದೆ. ಇಲ್ಲೊಬ್ಬ ನೆರೆಯ ರಾಜ್ಯವಾದ ಛತ್ತೀಸ್ಗಡ, ಬಿಲಾಸ್ಪುರ್ ಜಿಲ್ಲೆಯ ಮಸ್ತೂರಿ ತಾಲೂಕಿನವರಾದ ವಿಕಲ ಚೇತನ 'ಸುಖ್ ಚಂದ್' ಮತ್ತವರ ಕುಟುಂಬದ 'ಹಗ್ಗದ ಮೇಲಣ ಸ್ವತಂತ್ರ ಬದುಕಿ'ನ ಯಶೋಗಾಥೆ ಇದು.




ನಾಲ್ಕು ಜನ ಅಣ್ಣಂದಿರ ತುಂಬು ಸಂಸಾರ, ಬಡತನ, ನಿರುದ್ಯೋಗ, ನಿಲ್ಲಲು ನೆಲೆಯಿಲ್ಲ, ಉಣಲು ಬಾನ ವಿಲ್ಲದೆ ಕೂಲಿ–ನಾಲಿ ಮಾಡಿ ಜೀವನ ಬಂಡಿ ಸಾಗಿತ್ತು. ವಿಧಿಯಾಟ ಅಕಾಲಿಕ ಮರಣಕ್ಕೆ ತುತ್ತಾದ ತಂದೆ ; ಗಂಡನ ಚಿಂತೆಯಲ್ಲಿ ಚಿತೆ ಏರಿದ ತಾಯಿ. ಸುಖ್ ಚಂದ್ ಕೊನೆಯವ. ಮೂರು ಜನ ದುಡಿದು ನಾಲ್ಕು ಕಾಸು ಅಂತ ಸಂಪಾದನೆ ಮಾಡಿಕೊಂಡು, ತಮ್ಮ ತಮ್ಮ ಬಳಗದಲ್ಲಿಯೇ ಹೆಣ್ಣುನೋಡಿ ಮದುವೆ ಮಾಡಿಕೊಂಡು, ಹೆಳವ ತಮ್ಮನನ್ನು ಕಡೆಗಾಣಿಸಿದರು.

ಹೊಟ್ಟೆ ಬಲು ಕೆಟ್ಟದ್ದು ಅದನ್ನೊರೆಯಲು ಗಾರೆ ಕೆಲಸಕ್ಕೆ ನಡೆದ, ಕೆಲಸದ ಮಧ್ಯ ಬಿದ್ದ ಪೆಟ್ಟು, ಅಸಾಧ್ಯ ನೋವು ಮತ್ತಷ್ಟು ಬಲಹೀನಗೊಳಿಸಿತ್ತು. ಹೀಗೆ ಒಂದು ದಿನ ಸಂತೆ ಬಜಾರ್ ನಲ್ಲಿ ನಡೆದ ಸರ್ಕಸ್ ನ್ನು ನೋಡುತ್ತ ನಿಂತಿದ್ದ, ಹಗ್ಗದ ಮೇಲಣ ನಡೆ, ಅವರ ನುಡಿ ಇವನಿಗೆ ಉತ್ಸಾಹ ನೀಡಿತ್ತು, ಆ ತಂಡದ ಮಾಲೀಕನನ್ನು ಭೇಟಿಯಾಗಿ, ನಾನು ತಂದೆ–ತಾಯಿ ಇಲ್ಲದ ತಬ್ಬಲಿ ನಿಮ್ಮಲ್ಲಿ ಕೆಲಸಕ್ಕೆ ಇಟ್ಟುಕೊಳ್ಳಿ ಕೂಲಿ ಬೇಡ, ನಾನು ನಿಮ್ಮಲ್ಲೊಬ್ಬನಾಗಿರುತ್ತೇನೆಂದು ಬೇಡಿದ. ಮಾಲೀಕ ನಾಮದೇವ್ ಹೇಳಿದ – ನಾನೇ ತಿರಿದು ತಿನ್ನುವವ, 'ತಿರ್ಕಂಡು ತಿಂದರೂ ಕರ್ಕಂಡ್ ತಿನ್ನಬೇಕು' ಅಂತ ಗಾದೆನೇ ಇದೆ, ಸರಿ ಇರು ನೀನೊಬ್ಬ ನನಗೆ ಹೊರೆಯಾಗಲ್ಲ ಅಂತ ಸಮ್ಮತಿಸಿದ, ದಿನಕಳೆದಂತೆ ಆ ತಂಡದಲ್ಲಿ ಬಲು ಚುರುಕಿನಿಂದ ಎಲ್ಲ ಸರ್ಕಸ್ ಎಲ್ಲ ಕಲೆಗಳನ್ನು ಕರಗತ ಮಾಡಿಕೊಂಡ, ಹೆಳವ, ಬಿದ್ದ ಪೆಟ್ಟು, ಅಸಾಧ್ಯ ನೋವನ್ನು ಸಹಿಸುತ್ತ, ವಿದೂಷಕನ ಪಾತ್ರ ಮಾಡಿ, ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಿದ್ದ, ನಾಮದೇವನ ಮೂರು ಜನ ಹೆಣ್ಮಕ್ಕಳಲ್ಲಿ ಕೊನೆಯವಳು ಇವನನ್ನು ಬಹುವಾಗಿ ಮೆಚ್ಚಿಕೊಂಡಿದ್ದಳು, ಅವನಿಗೆ ಆಸರೆಯಾಗುವ ಭರವಸೆಯನ್ನು ನೀಡಿದ್ದಳು. ತಂದೆಯೊಂದಿಗೆ ವಿಷಯ ಪ್ರಸ್ಥಾಪಿಸಿ ವೈವಾಹಿಕ ಬಂಧನಕ್ಕೆ ಕಾಲಿರಿಸಿದ್ದಳು ಪ್ರಣತಿ.

'ಬಡತನಕ್ಕೆ ಸೌಂದರ್ಯ ಮತ್ತು ಸಂತಾನ ಜಾಸ್ತಿ' ಎಂಬಂತೆ ಆರು ವರ್ಷದ ದಾಂಪತ್ಯದಲ್ಲಿ ಮೂರು ಹೆಣ್ಣು ಮಕ್ಕಳನ್ನು ಪಡೆದ, ಬದುಕು ಸಾಗಿಸುವುದು ದುಸ್ತರವಾಯಿತು, ಕರುನಾಡು ಕೈ ಮಾಡಿ ಕರೆಯಿತು. ಬಂದು ತಾಲ್ಲೂಕಾ ಕೇಂದ್ರದಲ್ಲಿ ಬಿಡಾರ ಹೂಡಿ, ರಾಜರಥ " – 'TVS XL Super heavy duty' ಗಾಡಿ, ಕುಟುಂಬದೊಂದಿಗೆ ಸಾಮಗ್ರಿಗಳನ್ನು ಹೊತ್ತೊಯ್ದು, ದಿನಕ್ಕೆ ಮೂರ್ನಾಲ್ಕು ಹಳ್ಳಿಗಳಿಗೆ ತಿರುಗಿ ತನ್ನ ಕಲೆಯನ್ನು ಪ್ರದರ್ಶಿಸಿ ದಿನವೊಂದಕ್ಕೆ ಸಾವಿರದಿಂದ – ಸಾವಿರದ್ಯೆನೂರು ಸಂಪಾದಿಸಿ ಬಾಳ ಸಾಗಿಸುತ್ತಿದ್ದ.

ಬಡವನ ದುಡಿತ ಎಲ್ಲಿಯವರೆಗೆ..? ರಟ್ಟೆಯಲ್ಲಿ ಶಕ್ತಿಯಿರುವವರಗೆ, ನೋವು ಮರೆಯಲು ಆಗಾಗ ಕುಡಿತ ಬೇರೆ, ಹೆಂಡತಿ ಮಕ್ಕಳು ಕುಡಿಯುವುದು ಬೇಡ ಅನ್ನಲಾದೀತೆ..? ಅಪ್ಪನ ನೋವಿಗೆ ; ಸೇಂದಿ ಮದ್ದು, ದುಡಿದ ಜೀವ ಕುಡಿದುಂಡು ಮಲಗಲು ಸಮ್ಮತಿಸಿತ್ತು. ಹಿರಿಯ ಮಗಳು ಸ್ಫೂರ್ತಿ, ಕೈಗೆ ಬಂದಳು, ಎಷ್ಟೆಂದರೆ..? ಅಪ್ಪನ ಬಾಳ ಬಂಡಿಯ ನೊಗಕ್ಕೆ ಹೆಗಲು ಕೊಡುವಷ್ಟು..! ಹೆಂಣೆಂದರೆ..? ಆಕರ್ಷಕ ವ್ಯಕ್ತಿತ್ವ..! ಸ್ಫೂರ್ತಿಯ 'ಹಗ್ಗದ ಮೇಲನ ನಡೆ, ಎ.ಆರ್. ರೆಹಮಾನ್ ರ ಹಿಂದಿ ಹಾಡಿಗೆ ಹೆಜ್ಜೆ ಹಾಕುವ ದೃಶ್ಯ ಜನ–ಮನ ಸೂರೆಗೊಳ್ಳುವಂತದ್ದು.

ಹೆಂಣೆಂದರೆ..? ಬಾಯ್ಯಾಯ್ ಬಿಡುವ ಜನರ ಜೊತೆಗೆ ಕಲೆಯ ಆರಾಧಕರು ಕೂಡ ಮೆಚ್ಚಿ ದುಡ್ಡನ್ನು ನೀಡುತ್ತಾ ಇದ್ದರು, ಬದುಕು ಸಾಗಿದೆ, ಎಲ್ಲಿಗೆ ಪಯಣ ಎಂದರಿಯದೆ..!

ಹೆಳವ ಕೂಡ ಹೆದ್ದಾರಿ ಪಯಣ ಕ್ರಮಿಸಿ ಗುರಿಮುಟ್ಟಬಲ್ಲ ಎಂಬುದಕ್ಕೆ ಹೆಸರಿನಲ್ಲಿಯೇ ಸುಖವನ್ನು ಹೊಂದಿದ ಈ 'ಸುಖ್ ಚಂದ' ನಮಗೆ ಆತ್ಮವಿಶ್ವಾಸ ತುಂಬಿದರೆ, ಮತ್ತೋರ್ವರ ಬಾಳಿಗೆ ಬೆಳುಕು ನೀಡಿದ ಪ್ರಣತಿ ಆದರ್ಶಪ್ರಾಯಳು ಎನಿಸಿದರೆ.., ಹೆಂಣೆಂದರೆ ಹೀಗಳೆಯುವ ಜನಕ್ಕೆ ತಂದೆಯ ಕಷ್ಟಕ್ಕೆ ಮಿಡಿದು, ಜವಾಬ್ದಾರಿಯನ್ನು ಹೊತ್ತವಳು ನಮ್ಮೆಲ್ಲರಿಗೂ 'ಸ್ಫೂರ್ತಿ'ಯ ಸೆಲೆಯಾಗಿದ್ದಾಳೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಹೃದಯ ಕರಗುವ ಸಮಯ

ನಿನ್ನ ಅಗಾದ ಪ್ರೀತಿಯಲ್ಲಿ
ಒಂದಾಗಿ ಹೋದ ನನಗೆ
ಕೊನೆಗೆ ಅರಿವಾದದ್ದು ಇಷ್ಟೇ.
ಅಲ್ಲಿ ನೀನೂ ಇಲ್ಲ ನಾನೂ ಇಲ್ಲ,
ಉಳಿದಿರುವುದೊಂದೇ ಪ್ರೀತಿ.
ಶುಭ್ರ ದೀಪದಂತೆ ನಿತ್ಯ
ನಿರಂತರವಾಗಿ ಪ್ರಜ್ವಲಿಸುತಲಿತ್ತು .

ಒಬ್ಬರ ಹೃದಯದ ಇರುವಿಕೆ
ಮತ್ತೊಬ್ಬರಿಗೆ ಪರಸ್ಪರ ಪರಿಚಯವಾಗಿ
ಜೀವಂತಿಕೆಯಲಿ ನರ್ತಿಸಿ
ಗಾಢ ಆಲಿಂಗನದಲ್ಲಿ ಬೆರೆತು,
ತಮ್ಮಗರಿವಿಲ್ಲದೆ ಪ್ರೇಮ ಶರಧಿಯಲಿ
ಮಿಂದಾಗ, ಕೊನೆಗೊಂದೇ ಉಳಿದಿತ್ತು
ಸಾಗರ, ಮಹಾಸಾಗರ .ಮತ್ತೆ ಅಲ್ಲಿ
ನೀನೂ ಇಲ್ಲ,ನಾನೂ ಇಲ್ಲ.

– ಗುರು ಹಿರೇಮಠ,
ಹಗರಿಬೊಮ್ಮನಹಳ್ಳಿ

### ಆಡಂಬರ

ಬದುಕು ಸರಳತೆಯಿಂದ ಕೂಡಿರಲಿ
ಆಡಂಬರ ಅದ್ದೂರಿತನಕೆ ಮರುಳಾಗದಿರಲಿ
ಹೃದಯದಲ್ಲಿ ತುಂಬಿರಲಿ ಸಿರಿತನ
ಅಹಂಕಾರ ದರ್ಪಗಳಿಲ್ಲದೆ ಸಾಗಲಿ ಜೀವನ

ಹಣವಿದ್ದರೆ ಹತ್ತಿರ ಬರುವರು ಮನುಜರು
ಹಣವಿಲ್ಲದಿದ್ದಾಗ ದೂರಹೋಗುವರು ಅದೇ ಜನರು
ಆಡಂಬರದ ಅಬ್ಬರಕ್ಕೆ ಮರೆಯಾಗುತಿದೆ ಸಂಸ್ಕಾರ
ಸಂಸ್ಕಾರವೇ ನೀಡುವುದು ಜೀವನಕ್ಕೊಂದು ಆಕಾರ

ಮನದಲ್ಲಿ ತುಂಬಿರಲಿ ಪ್ರೀತಿ ಆದರ
ಸ್ನೇಹಿತರ ಆಗಮನವೇ ಬದುಕಿನ
ಆಡಂಬರ
ಸಾಗಿಸೋಣ ನಾವು ಸರಳವಾದ ಜೀವನ
ಸದಾ ಜೊತೆಯಲ್ಲಿರಲಿ ಪ್ರಾಮಾಣಿಕ ಗೆಳೆತನ

–ಚೇತನ ಭಾರ್ಗವ, ಬೆಂಗಳೂರು

# ಅಂಗನವಾಡಿ ಕಾರ್ಯಕರ್ತೆಯರ ವಿವಿಧ ಬೇಡಿಕೆ ಈಡೇರಿಕೆಗೆ ಅಹೋರಾತ್ರಿ ಧರಣಿ



ಹೊಸಪೇಟೆ ಜಿಲ್ಲಾಧಿಕಾರಿ ಕಚೇರಿ ಎದುರು ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನಡೆಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಅಹೋರಾತ್ರಿ ಹೋರಾಟ ಎರಡನೆ ದಿನ ಬುಧವಾರ ಮುಂದುವರೆಯಿತು. ಜಿಲ್ಲೆಯ ಆರು ತಾಲೂಕುಗಳಿಂದ ಅಂಗನವಾಡಿ ಕಾರ್ಯಕರ್ತರು, ಸಹಾಯಕಿಯರು ಹೋರಾಟದಲ್ಲಿ ಭಾಗವಹಿಸಿ, ವೇತನ ಹೆಚ್ಚಳ, ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸಲು ಒತ್ತಾಯಿಸಿದರು.

# ಬಾಲಕಿ ಅತ್ಯಾಚಾರಿಗೆ 20 ವರ್ಷ ಜೈಲು ಶಿಕ್ಷೆ

■ **ಹಂಪಿ ಟೈಮ್ಸ್ ಕೊಪ್ಪಳ**

ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಶೌಕತ್‌ಅಲಿ ಗುಡ್ಡದಬಾವಿ ಸಾ: ಕುಷ್ಟಗಿ ಇತನ ಮೇಲಿನ ಆರೋಪ ಸಾಭಿತಾಗಿದೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ [ಪೋಕ್ಸೊ] ಕೊಪ್ಪಳ ರವರು ಆರೋಪಿಗೆ ಶಿಕ್ಷೆ ವಿಧಿಸಿರುತ್ತಾರೆ.

ಕುಷ್ಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಕುಷ್ಟಗಿ ಪಟ್ಟಣ ನಿವಾಸಿ ಶೌಕತ್‌ಅಲಿ ಗುಡ್ಡದಬಾವಿ ಈತನು ಅಪ್ರಾಪ್ತ ವಯಸ್ಸಿನ ಬಾಧಿತಳಿಗೆ ಪರಿಚಯ ಮಾಡಿಕೊಂಡು ಪ್ರೀತಿಸಿ ಮದುವೆ ಯಾಗುವುದಾಗಿ ನಂಬಿಸಿದ್ದರಿಂದ ಬಾಧಿತಳು ಅವನೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದು 2023ರ ಏಪ್ರಿಲ್ 3ರಂದು ಬಾಧೀತಳು ಟ್ಯೂಶನ್ ಮುಗಿಸಿಕೊಂಡು ಮನೆಗೆ ಬರುತ್ತಿದ್ದಾಗ ಮಶೀದಿ ಹತ್ತಿರ ಎಲ್ಲಿಯಾದರೂ ಹೋಗಿ ಮದುವೆ ಯಾಗೋಣ ಎಂದು ಹೇಳಿ ತನ್ನ ಸಂಬಂಧಿಕರ ಮನೆಗೆ ಕರೆದುಕೊಂಡು ಹೋಗಿ ಅದೇ ದಿನ ಸಂಬಂಧಿಕರ ಮನೆಯಲ್ಲಿ ರಾತ್ರಿ ಊಟ ಮಾಡಿ ಮಲಗಿದ ನಂತರ ಬಾಧಿತಳಿಗೆ ಆರೋಪಿತನು ಅತ್ಯಾಚಾರ ಮಾಡಿದ್ದಾನೆ. ಮರುದಿನ ಆರೋಪದ ಹಿನ್ನೆಲೆಯಲ್ಲಿ ಕುಷ್ಟಗಿ ಪೊಲೀಸ್ ಠಾಣೆಯ ಪಿ.ಎಸ್.ಐ ಚಂದ್ರಶೇಖರ ಅವರು ದೂರು ಸ್ವೀಕರಿಸಿದ್ದರು. ಪ್ರಕರಣದ ತನಿಖೆಯನ್ನು ಸಿಪಿಐ ನಿಂಗಪ್ಪ ಅವರು ನಿರ್ವಹಿಸಿದ್ದು, ತನಿಖೆಯಲ್ಲಿ ಆರೋಪಿತನ ಮೇಲಿನ ಆರೋಪಣೆಗಳು ಮೇಲ್ನೋಟಕ್ಕೆ ಸಾಭಿತಾಗಿದ್ದರಿಂದ ಆರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವು ಸ್ಪೇ.ಎಸ್‌ಸಿ[ಪೋಕ್ಸೊ] ಸಂ: 30/2023ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯ ಆರೋಪಿ ಶೌಕತ್‌ಅಲಿ ಗುಡ್ಡದಬಾವಿ ಸಾ: ಕುಷ್ಟಗಿ ಇತನ ಮೇಲಿನ ಆರೋಪಣೆಗಳು ಸಾಭೀತಾಗಿವೆ ಎಂದು 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ. 30,000 ಗಳ ದಂಡವನ್ನು ಭರಿಸುವಂತೆ ಆದೇಶಿಸಿ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ [ಪೋಕ್ಸೊ] ನ್ಯಾಯಾಧೀಶರಾದ ಕುಮಾರ ಡಿ.ಕೆ ಅವರು 2024ರ ಡಿಸೆಂಬರ್ 5ರಂದು ತೀರ್ಪು ಹೊರಡಿಸಿರುತ್ತಾರೆ.ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿ ಯೋಜಕಿ ಗೌರಮ್ಮ ದೇಸಾಯಿ ಅವರು ಈ ಪ್ರಕರಣ ನಡೆಸಿ ವಾದ ಮಂಡಿಸಿದ್ದರು. ಕುಕನೂರ ಪೊಲೀಸ್ ಠಾಣೆಯ ಸಿಬ್ಬಂದಿ ಹನುಮೇಶ ಜಗ್ಗಲ್ ಅವರು ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಸಕಾಲಕ್ಕೆ ಹಾಜರಪಡಿಸುವಲ್ಲಿ ಸಾಕಷ್ಟು ಸಹಕರಿಸಿ ರುತ್ತಾರೆ ಎಂದು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಸಿರಿಧಾನ್ಯಗಳ ಸೇವನೆಯಿಂದ ಆರೋಗ್ಯ ಸಮೃದ್ಧಿ : ಎಡಿಸಿ ಮಹಮ್ಮದ್ ಎನ್.ಝುಬೇರ್



■ **ಹಂಪಿ ಟೈಮ್ಸ್ ಬಳ್ಳಾರಿ**

ಸಿರಿಧಾನ್ಯಗಳು ಪೋಷಕಾಂಶಗಳಿಂದ ಸಮೃದ್ಧವಾಗಿದ್ದು, ಹೃದಯ ಆರೋಗ್ಯ, ಮಧುಮೇಹ ನಿಯಂತ್ರಣ ಮತ್ತು ತೂಕ ಸಮತೋಲನಕ್ಕೆ ಬಹಳ ಸಹಾಯಕವಾಗಿವೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್ ಝುಬೇರ್ ಅವರು ಹೇಳಿದರು.

ನಗರದ ಜಂಟಿ ಕೃಷಿ ನಿರ್ದೇಶಕ ಕಚೇರಿ ಆವರಣದಲ್ಲಿ ಸಿರಿಧಾನ್ಯ ಮತ್ತು ಸಾವಯವ ಅಂತರಾಷ್ಟ್ರೀಯ ವಾಣಿಜ್ಯ ಮೇಳ 2025ರ ಪ್ರಯುಕ್ತ ಜಿಲ್ಲಾ ಮಟ್ಟದ ಸಿರಿಧಾನ್ಯ ಹಾಗೂ ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆ ಕಾರ್ಯಕ್ರಮವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜನರ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಸಿರಿಧಾನ್ಯಗಳ ಬಳಕೆಯನ್ನು ಮತ್ತು ಸಿರಿಧಾನ್ಯ ಖಾದ್ಯಗಳ ತಯಾರಿಕೆಯನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಬೇಕಾಗಿದೆ. ಸಜ್ಜೆ, ಜೋಳ, ರಾಗಿ, ಮತ್ತು ನವಣೆ ಸೇರಿದಂತೆ ಮುಂತಾದ ಸಿರಿಧಾನ್ಯಗಳಿಂದ ತಯಾರಿಸಿದ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ಆರೋಗ್ಯಕ್ಕೆ ಒಳ್ಳೆಯದು. ಈ ಆಹಾರಗಳ ಲಾಭ ಉಪಯುಕ್ತತೆ ಮತ್ತು ಬಳಕೆ ಕುರಿತಂತೆ ಹೆಚ್ಚಿನ ರೀತಿಯಲ್ಲಿ ವ್ಯಾಪಕ ಅರಿವು ಮೂಡಿಸುವ ದಿಶೆಯಲ್ಲಿ ಈ ರೀತಿಯ ಸ್ಪರ್ಧೆಗಳು ಬಹಳಷ್ಟು ಉಪಯೋಗಕಾರಿ ಎಂದು ತಿಳಿಸಿದರು.

ವಿದೇಶಿ ಆಹಾರ ಪದಾರ್ಥಗಳಾದ ಪಿಜ್ಜಾ, ಬರ್ಗರ್ ಮತ್ತು ಡೊಮಿನೋಸ್ ಮತ್ತು ಎಣ್ಣೆ ಪದಾರ್ಥ ಸೇವಿಸುವುದು ಆರೋಗ್ಯ ಪೂರಕವಲ್ಲ. ಪಾಕ ಸ್ಪರ್ಧೆಗೆ ಮಾತ್ರ ಸಿರಿಧಾನ್ಯ ಪದಾರ್ಥಗಳು ಸೀಮಿತವಾಗಬಾರದು. ನಿಮ್ಮ ಮನೆಗಳಲ್ಲಿ ಸಹ ಪ್ರತಿದಿನ ಸಿರಿಧಾನ್ಯಗಳಿಂದ ವಿವಿಧ ಬಗೆಯ ಪದಾರ್ಥಗಳು ತಯಾರಿಸಿ, ನಿಮ್ಮ ಮಕ್ಕಳಿಗೆ ನೀಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಸೋಮ ಸುಂದರ್, ಕೃಷಿ ಇಲಾಖೆಯ ಉಪ ನಿರ್ದೇಶಕರಾದ ಮಂಜುನಾಥ್, ಎನ್.ಕೆಂಗೇಗೌಡ, ಹಗರಿ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳಾದ ಶಿಲ್ಪಾ, ರಾಜೇಶ್ವರಿ, ಬಳ್ಳಾರಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಎಂ.ದಯಾನಂದ ಸೇರಿದಂತೆ ಕೃಷಿ ಇಲಾಖೆ ಸಿಬ್ಬಂದಿ ವರ್ಗ ಮತ್ತು ಮಹಿಳೆಯರು ಉಪಸ್ಥಿತರಿದ್ದರು.

# ಹೊರಗುತ್ತಿಗೆ ನೌಕರರ ಧರಣಿ

## ಹೊರಗುತ್ತಿಗೆ ನೌಕರರ ಸಂಘದ ಮುಖಂಡರು ವಿವಿಧ ಬೇಡಿಕೆಗೆ ಈಡೇರಿಕೆಗೆ ಒತ್ತಾಯ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಮಾಸಿಕ ರೂ.31 ಸಾವಿರ ಕನಿಷ್ಠ ವೇತನ, ವಸತಿ ನಿಲಯಗಳು ಮತ್ತು ವಸತಿಶಾಲೆಗಳ ಹೊರಗುತ್ತಿಗೆ ನೌಕರರಿಗೆ ಸರಕಾರವೆ ನೇರವಾಗಿ ವೇತನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ರಾಜ್ಯ ಸರಕಾರಿ ವಸತಿ ನಿಲಯ ಮತ್ತು ವಸತಿ ಶಾಲೆಗಳ ಹೊರಗುತ್ತಿಗೆ ನೌಕರರ ಸಂಘದ ಮುಖಂಡರು ಧರಣಿ ಇತ್ತೀಚೆಗೆ ನಡೆಸಿದರು.




ಸಂಘದ ಜಿಲ್ಲಾ ಮುಖಂಡ ಕೊಟಿಗೆ ಮಲ್ಲಿಕಾರ್ಜುನ ಮಾತನಾಡಿ, ಕಾರ್ಮಿಕ ಕಾನೂನು ಪ್ರಕಾರ ವಾರದ ರಜೆ ಮತ್ತು ಕೆಲಸದ ಸಮಯ ನಿಗದಿಪಡಿಸಬೇಕು. ನಿವೃತ್ತಿ ನಂತರ ಜೀವನ ನಿರ್ವಹಣೆಗೆ 10 ಲಕ್ಷ ರೂ.ಪರಿಹಾರ ನೀಡಬೇಕು. ಪ್ರತಿ ತಿಂಗಳು 5ರೊಳಗಾಗಿ ವೇತನ ನೀಡಬೇಕು. ಕೂಡಲೆ ಬಾಕಿ ವೇತನ ಪಾವತಿಸಬೇಕು, ಖಾಸಗಿ ಕಂಪನಿಗಳಿಗೆ ವೇತನದ ಹೊಣೆ ನೀಡಬಾರದು. ಸೇವಾ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು. ಶಿರಸ್ತೆದಾರ ಶಿವಕುಮಾರಗೌಡಗೆ ಮನವಿ ಸಲ್ಲಿಸಿದರು. ಮುಖಂಡರಾದ ಮುದುಕಪ್ಪ, ರಿಜ್ವಾನ್, ಮಾಳಮ್ಮ, ನೇತ್ರಮ್ಮ, ರಾಮಕ್ಕ, ದುರುಗಪ್ಪ, ವಸಂತ, ದುರುಗಮ್ಮ, ವೆಂಕಟೇಶ, ನಾಗರಾಜ ಇತರರಿದ್ದರು.

# ಸಿರಿಧಾನ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನಕ್ಕಾಗಿ ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25 ನೇ ಸಾಲಿನ ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆ ದ್ವಿದಳ ಧಾನ್ಯ ಕಾರ್ಯಕ್ರಮದಡಿ ರೈತ ಉತ್ಪಾದಕರ ಸಂಸ್ಥೆ, ಸ್ವಸಹಾಯ ಗುಂಪುಗಳಿಗೆ ಮಾರು ಕಟ್ಟೆ ಬೆಂಬಲ ಹಾಗೂ ನ್ಯೂಟ್ರಿ ಸಿರಿಧಾನ್ಯ ಕಾರ್ಯಕ್ರಮದಡಿ ಸಿರಿಧಾನ್ಯಗಳ ಕಿಚನ್ ಸ್ಥಾಪನೆಗೆ ಸಂಸ್ಕರಣೆ ಘಟಕಗಳ ಅಳವಡಿಕೆ, ಮಾರುಕಟ್ಟೆ ಬೆಂಬಲ ಮತ್ತು ಸಂಸ್ಕರಣಾ ಕ್ಲಸ್ಟರ್ ಸ್ಥಾಪನೆಗೆ ಸಹಾಯಧನ ನೀಡಲು ವಿಜಯನಗರ ಜಿಲ್ಲೆಯ ರೈತರು, ರೈತ ಉತ್ಪಾದಕರ ಸಂಸ್ಥೆಗಳ, ಸ್ವಸಹಾಯ ಗುಂಪುಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ ಎಂದು ವಿಜಯನಗರ ಜಂಟಿ ಕೃಷಿ ನಿರ್ದೇಶಕರಾದ ಶರಣಪ್ಪ ಮುದಗಲ್ ತಿಳಿಸಿದ್ದಾರೆ.

**ಸಹಾಯಧನ ನೀಡುವ ಘಟಕಗಳು ವಿವರ :**

ರೈತರು, ನೋಂದಾಯಿತ ರೈತ ಉತ್ಪಾದಕರ ಸಂಸ್ಥೆ ಹಾಗೂ ರೈತರ ಗುಂಪುಗಳು ಗರಿಷ್ಠ 50 ಲಕ್ಷರೂ ವೆಚ್ಚದಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಸಂಸ್ಕರಣಾ ಘಟಕಗಳೊಂದಿಗೆ ಶೇಖರಣಾ ಗೋದಾ ಮು ಸೌಲಭ್ಯ ಹಾಗೂ ನೋಂದಾಯಿತ ರೈತ ಉತ್ಪಾದಕರ ಸಂಸ್ಥೆಗಳಿಂದ ಗರಿಷ್ಠ 5 ಲಕ್ಷರೂ ವೆಚ್ಚದಲ್ಲಿ 'ಮಿಲೆಟ್ ಕಿಚನ್' ಒಳಗೊಂಡಂತೆ ಸಿರಿಧಾನ್ಯಗಳ ಸಾವಯವ ಪ್ರಮಾಣೀಕರಣ, ಬ್ರಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ ಮತ್ತು ಸಂಸ್ಕರಣಾ ಸೌಲಭ್ಯಗಳಿಗೆ ಸಹಾಯಧನ ನೀಡಲಾ ಗುವುದು. ಆಸಕ್ತ ರೈತರು, ರೈತ ಉತ್ಪಾದಕರ ಸಂಸ್ಥೆಗಳು, ಸ್ವ–ಸಹಾಯ ಗುಂಪುಗಳು ತಮ್ಮ ರೈತ ಸಂಪರ್ಕ ಕೇಂದ್ರಗಳಲ್ಲಿ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಜ.5 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಕಲಚೇತನರ, ಹಿರಿಯ ನಾಗರಿಕರ ವೈದ್ಯಕೀಯ ತಪಾಸಣಾ ಶಿಬಿರ

■ **ಹಂಪಿ ಟೈಮ್ಸ್ ಬಳ್ಳಾರಿ**

ಅಲಿಮ್ಕೊ ಆಕ್ಸಿಲಿಯರಿ ಉತ್ಪಾದನಾ ಕೇಂದ್ರ ವತಿಯಿಂದ ಎಡಿಐಪಿ ಹಾಗೂ ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಹಿರಿಯ ನಾಗರಿಕರಿಗೆ ಮತ್ತು ವಿಕಲಚೇತನರಿಗೆ ಅವಶ್ಯ ವಿರುವ ಸಾಧನ ಸಲಕರಣೆ ವಿತರಿಸು ವುದಕ್ಕೆ ತಾಲ್ಲೂಕು ಮಟ್ಟದಲ್ಲಿ ವೈದ್ಯಕೀಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

**ತಪಾಸಣಾ ಶಿಬಿರದ ಸ್ಥಳ–ದಿನಾಂಕ:**

ಡಿ.23 ರಂದು ಬಳ್ಳಾರಿ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 04 ರವರೆಗೆ, ಡಿ.24 ರಂದು ಕುರುಗೋಡು ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರ ದಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 04 ರವರೆಗೆ, ಡಿ.26 ರಂದು ಸಿರುಗುಪ್ಪ ತಾಲ್ಲೂಕಿ ನ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಯಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 04 ರವರೆಗೆ ಹಾಗೂ ಡಿ.27 ರಂದು ಸಂಡೂರು ತಾಲ್ಲೂಕಿನ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 04 ರವರೆಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು, ಜಿಲ್ಲೆಯ ವಿಕಲಚೇತ ನರು ಹಾಗೂ ಹಿರಿಯ ನಾಗರಿಕರು ತಪಾಸಣೆ ಶಿಬಿರದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಟಣ ತಿಳಿಸಿದ್ದಾರೆ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

## Sub : English (S.L)

## S.R - 3 A Great Martyr ever Cherished

Most important 2 marks questions and answers

**1. What did Hanif choose as his mission? Why did he do so?**

Ans : Hanif knew that the life for him was short. He wanted to serve the nation. Therefore he joined Indian Army as a soldier. He believed that a person working for the country could change many lives.

**2. Life for Hanif in the beginning was never a smooth sail. Why was it so?**

Ans : Hanif lost his father when he was just 8 years old. His mother Hema Aziz was a vocal artist. As she travelled with the performance wing on a touring job, she would often have to leave Hanif and his two brothers alone. They had to do their work for themselves.So the life was not a smooth sail for him in the beginning.

**3. How was life for Hanif always 'ekdam bindas'? OR**
**Hanif was a young man with varied talents and interests. Support the statement.**

Ans : Life for Hanif was always 'ekdam bindas.' He dabbled in art, sketched very well, made beautiful cards out of waste material. Read a great deal and loved playing the drums. The army officers formed a group of music in his name called 'Haneef' as a young man he was so talented and had interest in life.

**4. What did Hanif and his brothers learn from the absence of their mother from home? OR**
**How did Hema Aziz teach her children the message that "one's duty is the most important thing in life"?**

Ans : The children became responsible with the mother after the death of their father at an early age. She was working as a vocal artist with the performance wing of information and broadcasting. Hers was a touring job. So the children had to get up on their own, get ready for school without mother having to tell them. Very soon they realized that 'doing ones duty is the most important thing in life'.

**5. How does the writer describe the 'introvert' Hanif?**

Ans : Hanif was an introvert because he is interested in his own thoughts. He began to make friends only at the age of 14 years. He always stood first to help the people who were in trouble. By the way he derived joy.

www.hampitimes.com - Hampi Times Margadarshi

### -: Tips for effective exam preparation :-

**CREATE A STUDY PLAN:**
Organize your study schedule by allocating specific time slots for each subject or topic. Prioritize areas where you need more practice.

**UNDERSTAND THE EXAM FORMAT:**
Familiarize yourself with the type of questions (e.g., multiple-choice, essays, problem-solving) and the exam syllabus to know what to expect.

**SET SPECIFIC GOALS:**
Break down your preparation into achievable goals for each study session to stay focused and motivated.

**REVIEW NOTES REGULARLY:**
Go through your class notes and highlight key points. Summarizing concepts in your own words can help reinforce understanding.

**PRACTICE PAST PAPERS:**
Solve previous exam papers to understand the question patterns, improve time management, and identify weak areas.

**STAY ORGANIZED:**
Keep your study materials, notes, and reference books well-organized for easy access. Use tools like highlighters, sticky notes, or digital apps to stay on track.

**TAKE REGULAR BREAKS:**
Follow the Pomodoro technique or a similar approach to avoid burnout. For example, study for 25–50 minutes and then take a 5–10-minute break.

**MAINTAIN A HEALTHY ROUTINE:**
Get adequate sleep, eat nutritious meals, and exercise regularly to keep your mind and body in top condition for learning.

**ASK FOR HELP:**
If you encounter difficult topics, seek help from teachers, classmates, or online resources to clarify your doubts.

**STAY POSITIVE AND MANAGE STRESS:**
Use mindfulness techniques, like deep breathing or meditation, to manage anxiety. Stay confident by focusing on how much progress you've made rather than what's left.

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಹಂಪಿ ಟೈಮ್ಸ್
HAMPI TIMES
ಗುರುವಾರ/Thursday 19.12.2024
ವಿಜಯನಗರ





ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**19–12–2024 – ಗುರುವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆಶ್ಲೇಷ |
| ಯೋಗ | : ವೃಧೃತಿ |
| ಕರಣ | : ಬಾಳವ |
| ಸೂರ್ಯೋದಯ | : 07:04:06 |
| ಸೂರ್ಯಾಸ್ತ | : 17:44:24 |
| ರಾಹು ಕಾಲ | : 13:44–15:06 |
| ಯಮಘಂಡ ಕಾಲ | : 07:04–08:24 |
| ಗುಳಿಕ ಕಾಲ | : 09:44–11:04 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 18–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.89 ಅಡಿ |
| ಒಳ ಹರಿವು | 2310 ಕ್ಯುಸೆಕ್ |
| ಹೊರ ಹರಿವು | 6635 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 89.948 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1590.28 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 1844 ಕ್ಯುಸೆಕ್ |
| ಸಾಮರ್ಥ್ಯ | 11.2669 ಟಿಎಂಸಿ |

## ನಿಧನ

### ರಾಧಾಬಾಯಿ ಪ್ಯಾಟಿ

**ಕೊಪ್ಪಳ:** ಇಲ್ಲಿನ ಅಮೀನಪುರ ಬಡಾವಣೆಯ ನಿವಾಸಿಯಾಗಿದ್ದ ರಾಧಾಬಾಯಿ ನಾರಾಯಣಾ ಚಾರ್ಯ ಪ್ಯಾಟಿ (76) ಬುಧವಾರ ನಿಧನರಾದರು.



ಮೃತರಿಗೆ ಪತ್ರಕರ್ತರಾದ ಆನಂದತೀರ್ಥ ಪ್ಯಾಟಿ, ಧಾರವಾಡ ಟಿವಿ9 ವರದಿಗಾರ ನರಸಿಂಹಮೂರ್ತಿ ಪ್ಯಾಟಿ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಸಂಜೆ ಕೊಪ್ಪಳದಲ್ಲಿ ಅಂತ್ಯಕ್ರಿಯೆ ನೆರವೇರಿತು.

# ತೋರಣಗಲ್‌ಗೆ ಸರ್ಕಾರಿ ಪಾಲಿಟೆಕ್ನಿಕ್ ಸಂಡೂರಿಗೆ ನರ್ಸಿಂಗ್ ಕಾಲೇಜು ಮಂಜೂರಿಗೆ ಒತ್ತಾಯ

## ಸುವರ್ಣ ವಿಧಾನಸಭೆ ಕಲಾಪದಲ್ಲಿ ಸಂಡೂರು ಶಾಸಕಿ ಈ.ಅನ್ನಪೂರ್ಣ ಮನವಿ

■ **ಬೆಳಗಾವಿ ಸುವರ್ಣಸೌಧ**

ಸಂಡೂರು ಕ್ಷೇತ್ರದಲ್ಲಿ ಸಾಕಷ್ಟು ಉದ್ಯಮಗಳಿದ್ದು, ಇದಕ್ಕಾಗಿ ಕ್ಷೇತ್ರದಲ್ಲಿ ಯುವಜನರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಲುವಾಗಿ ತೋರಣಗಲ್‌ನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡಬೇಕು. ಜೊತೆಗೆ ಆರೋಗ್ಯ ಕ್ಷೇತ್ರ ಅಭಿವೃದ್ಧಿಗೆ ಸಂಡೂರಿನಲ್ಲಿ ಸರ್ಕಾರಿ ನರ್ಸಿಂಗ್ ಕಾಲೇಜು ಮಂಜೂರು ಮಾಡುವಂತೆ ಶಾಸಕಿ ಈ.ಅನ್ನಪೂರ್ಣ ಅವರು ಮನವಿ ಮಾಡಿದರು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಬುಧವಾರ ವಿಧಾನಸಭೆ ಕಲಾಪದಲ್ಲಿ ಭಾಗ ವಹಿಸಿ ಅವರು ಮಾತನಾಡಿದರು. ಸಂಡೂರು



ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಯನ್ನು 100 ಹಾಸಿಗೆಯಿಂದ 200 ಹಾಸಿಗೆಯ ಆಸ್ಪತ್ರೆ ಯನ್ನಾಗಿ ಮೇಲ್ದರ್ಜೆಗೇರಿಸಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುತ್ತೇನೆ. ಆದರೆ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರು, ಪ್ರಸೂತಿ ತಜ್ಞರು ಮುಂತಾದ ತಜ್ಞ ವೈದ್ಯರ ಕೊರತೆ ನೀಗಿಸಬೇಕು ಎಂದು ಮನವಿ ಮಾಡಿದರು.

ಕ್ಷೇತ್ರದಲ್ಲಿ ಗಣಿಗಾರಿಕೆ, ಉಕ್ಕು, ಪೇಂಟ್ ಹೀಗೆ ಹಲವು ಕಾರ್ಖಾನೆ, ಉದ್ದಿಮೆಗಳಿವೆ. ಕ್ಷೇತ್ರದ ಯುವಜನರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ತೋರಣಗಲ್‌ನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡಬೇಕು, ಹಾಗೂ ಆರೋಗ್ಯ ಕ್ಷೇತ್ರ ವೃದ್ಧಿಗೆ ಸಂಡೂರು ಪಟ್ಟಣದಲ್ಲಿ ನರ್ಸಿಂಗ್ ಕಾಲೇಜು ಮಂಜೂರು ಮಾಡಬೇಕು ಎಂದು ಶಾಸಕಿ ಒತ್ತಾಯಿಸಿದರು.

# ಚೊಚ್ಚಲ ಅಥವಾ ಗಂಡಾಂತರ ಗರ್ಭಿಣಿಯರು ನಿರ್ಲಕ್ಷ್ಯಿಸದೇ ನಿರಂತರ ತಪಾಸಣೆ ಮಾಡಿಸಿ

## ಡಿಎಚ್‌ಓ ಡಾ.ಯಲ್ಲಾ ರಮೇಶ್‌ಬಾಬು ಹೇಳಿಕೆ। ಆಯುಷ್ಮಾನ ಆರೋಗ್ಯ ಮಂದಿರಕ್ಕೆ ಭೇಟಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಚೊಚ್ಚಲ ಅಥವಾ ಗಂಡಾಂತರ ಗರ್ಭಿಣಿಯರು ಹತ್ತಿರದ ಸರಕಾರಿ ಆಸ್ಪತ್ರೆಗಳಲ್ಲಿ ನಿರಂತರ ತಪಾಸಣೆ ಮಾಡಿಸಬೇಕು ಹಾಗೂ ತಪ್ಪದೇ ತಾಯಿ ಕಾರ್ಡ್ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ಅವರು ಹೇಳಿದರು.

ಬಳ್ಳಾರಿ ತಾಲ್ಲೂಕಿನ ವೈ.ಕಗ್ಗಲ್ ಗ್ರಾಮದಲ್ಲಿ ಆಯುಷ್ಮಾನ ಆರೋಗ್ಯ ಮಂದಿರಕ್ಕೆ ಭೇಟಿ ನೀಡಿ ಗ್ರಾಮದಲ್ಲಿಯ ಗರ್ಭಿಣಿಯರ ಆರೋಗ್ಯ ವಿಚಾರಿಸಿ ಅವರ ಪಾಲಕರೊಂದಿಗೆ ಮಾತನಾಡಿದರು. ಮನೆಯಲ್ಲಿ ಮಗಳಾಗಲಿ ಅಥವಾ ಸೊಸೆಯಾಗಲಿ ಗರ್ಭಿಣಿಯೆಂದು ತಿಳಿದ ದಿನದಿಂದಲೇ ನಿರಂತರವಾಗಿ ವೈದ್ಯರಿಂದ ಮಾಡಿಸಬೇಕಾದ ತಪಾಸಣೆ ಹಾಗೂ ಅಗತ್ಯ ಚಿಕಿತ್ಸೆ ನೀಡುವ ಅವಶ್ಯಕತೆ ಇದ್ದಲ್ಲಿ ಕುಟುಂಬದ ಸದಸ್ಯರು ವೈಯಕ್ತಿಕ ಕೆಲಸಗಳ ಕಾರಣದಿಂದ ತಡ ಮಾಡಬಾರದು. ಗರ್ಭಿಣಿಯರ ಆರೋಗ್ಯ ಸುರಕ್ಷತೆಗೆ ಒತ್ತು ನೀಡಬೇಕು ಎಂದು ತಿಳಿಸಿದರು.




ಗಂಡಾಂತರ ಗರ್ಭಿಣಿಯರು ಎಂದು ಗುರ್ತಿಸಿದ ನಂತರ ವೈದ್ಯರ ಸೂಚನೆಯಂತೆ ಅವರ ನಿರಂತರ ನಿಗಾವಣೆ, ರಕ್ತದೊತ್ತಡ ಪರೀಕ್ಷೆ ಕೈಗೊಂಡ ನಂತರ ಕಂಡುಬರುವ ವ್ಯತ್ಯಾಸ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರಿಶೀಲಿಸಿ ಅಗತ್ಯವೆನಿಸಿದಲ್ಲಿ ತಜ್ಞ ವೈದ್ಯರ ಬಳಿ ತಕ್ಷಣವೇ ತೆರಳಬೇಕು ಎಂದರು.

ರಕ್ತಹೀನತೆ ಕಂಡುಬಂದಲ್ಲಿ ಸ್ಥಳೀಯವಾಗಿ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ನೀಡುವ ಚಿಕಿತ್ಸೆಯಿಂದ ಸುಧಾರಣೆ ಹೊಂದಬಹುದು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸಬೇಕು. ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಟ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ–ಟಿ, ನೀರೊಧ್ ಕುರಿತು ಆರೋಗ್ಯ ಶಿಕ್ಷಣ ಹೊಂದಬೇಕು ಮರೆಯಬಾರದು. ಅತಿ ಮುಖ್ಯವಾಗಿ ಗರ್ಭಿಣಿಗೆ ಮೇಲ್ಮಟ್ಟದ ಆಸ್ಪತ್ರೆಗೆ ಶಿಫಾರಸ್ಸು ಮಾಡುವಾಗ 108 ಆರೋಗ್ಯ ಕವಚ ಬರುವ ಸಮಯ ತಡವಾಗುವ ಸಾಧ್ಯತೆ ಇದ್ದಲ್ಲಿ ತಕ್ಷಣ ವೈದ್ಯಾಧಿಕಾರಿಗಳು ಪರ್ಯಾಯ ಸಾರಿಗೆ ವ್ಯವಸ್ಥೆ ಮಾಡಬೇಕು. ಹೆರಿಗೆ ವಿಷಯವನ್ನು ಆದ್ಯತೆಯಾಗಿಟ್ಟುಕೊಂಡು ಸ್ಥಳೀಯ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸಮನ್ವಯ ಸಭೆ ಕೈಗೊಂಡು ತಮ್ಮ ವ್ಯಾಪ್ತಿಯ ಗರ್ಭಿಣಿಯರ ಆರೈಕೆ ಕುರಿತು ನಿಗಾವಹಿಸಲು ಕ್ರಮವಹಿಸಿ ಎಂದು ತಿಳಿಸಿದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಹನುಮಂತಪ್ಪ ಅವರು ಮಾತನಾಡಿ, ಹಬ್ಬ, ಜಾತ್ರೆ, ಊರ ದೇವರ ಪಜೆ ಮುಂತಾದ ಆಚರಣೆಯ ಮಾಡುವಾಗ ಗರ್ಭಿಣಿಯ ಸಕಾಲದಲ್ಲಿ ಆಗಬೇಕಾದ ತಪಾಸಣೆಗೆ ಅಡಚಣೆಯಾಗದಂತೆ ಪಾಲಕರು ಮೊದಲು ಆದ್ಯತೆ ನೀಡಬೇಕು. ವೈದ್ಯಾಧಿಕಾರಿಗಳು ತಮ್ಮ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ಗಂಡಾಂತರ ಗರ್ಭಿಣಿಯರ ಮನೆ ಭೇಟಿ ಹಾಗೂ ಆರೋಗ್ಯದ ಸ್ಥಿತಿ ಕುರಿತು ಪ್ರತಿ ವಾರ ಚರ್ಚಿಸಬೇಕು ಎಂದು ಹೇಳಿದರು.

ಧಾರ್ಮಿಕ ಸ್ಥಳಗಳಿಗೆ ಗರ್ಭಿಣಿಯರು ತಮ್ಮ ಆರೋಗ್ಯ ಸಮಸ್ಯೆಗಳಿಗೆ ಪದೇ–ಪದೇ ಭೇಟಿ ನೀಡುತ್ತಿದ್ದರೆ ಅಂತ ಧಾರ್ಮಿಕ ಕೇಂದ್ರಗಳ ಸ್ವಾಮೀಜಿಯರನ್ನು ಭೇಟಿ ಮಾಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸೂಚಿಸುವಂತೆ ವಿನಂತಿಸಬೇಕು. ಆಕಸ್ಮಿಕ ಘಟನೆಗಳಲ್ಲಿ ಗರ್ಭಿಣಿಯರ ಆರೈಕೆಗೆ ಯಾರು ಇಲ್ಲದಿದ್ದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮಾಹಿತಿ ತಿಳಿಸಿ ಆರೈಕೆ ಕೇಂದ್ರಕ್ಕೆ ಕಳುಹಿಸಬೇಕು ಎಂದು ತಿಳಿಸಿದರು.


ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆರಿಗೆಗೆ ಗರ್ಭಿಣಿ ಬಂದಾಗ ಅಗತ್ಯ ಪರೀಕ್ಷೆ ಮೂಲಕ ಹೆರಿಗೆ ನಿರ್ವಹಿಲು ಸಾಧ್ಯತೆಯಾಗಬೇಕು. ಇಲ್ಲದಿದ್ದಲ್ಲಿ ಗಂಭೀರತೆ ಕಂಡುಬಂದರೆ ತಡ ಮಾಡದೇ ಸಿಬ್ಬಂದಿ ಸಹಿತ ಶಿಫಾರಸ್ಸಿಗೆ ಮರೆಯ ಬಾರದು ಎಂದರು. ವೈದ್ಯಾಧಿಕಾರಿ ಡಾ. ಕಾವ್ಯಶ್ರೀ, ಡಿಎನ್‌ಓ ಗಿರೀಶ್, ಹಿರಿಯ ಪ್ರಾಥಮಿಕ ಸುರಕ್ಷಾಧಿಕಾರಿ ಚಂದ್ರಕಲಾ, ಸಮುದಾಯ ಆರೋಗ್ಯಾಧಿಕಾರಿ ಮೊನಿಕಾ, ಪ್ರಾಥಮಿಕ ಸುರಕ್ಷಾಧಿಕಾರಿ ನಾಗಮ್ಮ, ಆಶಾ ಕಾರ್ಯಕರ್ತೆಯರಾದ ಸಿದ್ದಮ್ಮ, ರೇಣುಕಾ, ಕಸ್ತೂರಿ ಸೇರಿದಂತೆ ತಾಯಂದಿರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪ್ರವಾಸೋದ್ಯಮ ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರವಾಸೋದ್ಯಮ ಇಲಾಖೆಯಿಂದ 2024–25 ನೇ ಸಾಲಿನ ಎಸ್.ಸಿ.ಎಸ್.ಪಿ, ಹಾಗೂ ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಹಾಗೂ ಅತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರಾದ ಪ್ರಭುಲಿಂಗ ಎಸ್.ತಳಕೇರಿ ತಿಳಿಸಿದ್ದಾರೆ.

ಆಸಕ್ತ ಅಭ್ಯರ್ಥಿಗಳು ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರ ಲೋಟಸ್ ಮಹಲ್ ಬಳಿಯ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿ ಡಿ.28 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.



ತರಬೇತಿ ಪಡೆಯುವ ಅಭ್ಯರ್ಥಿಯ ವಯಸ್ಸು ಕನಿಷ್ಠ 20 ರಿಂದ 45 ವರ್ಷದೊಳಗಿರಬೇಕು. ತರಬೇತಿಯ ವಿವರಗಳು : 1. ಆಹಾರ ಮತ್ತು ಪಾನೀಯ ಸೇವೆಯ ಉಸ್ತುವಾರಿ (ಪುಡ್ ಅಂಡ್ ಬೆವರೇಜ್ ಸರ್ವೀಸ್ ಸ್ಟೇವರ್ಡ್) : ತರಬೇತಿಯ ಕಾಲಾವಧಿ 4 ತಿಂಗಳು ಹಾಗೂ 10 ನೇ ತರಗತಿ ಉತ್ತೀರ್ಣರಾಗಿರಬೇಕು. 2. ಕೊಠಡಿ ಪರಿಚಾರಕ (ರೂಂ ಅಟೆಂಡಂಟ್) : ತರಬೇತಿಯ ಕಾಲಾವಧಿ 4 ತಿಂಗಳು ಹಾಗೂ ಐದನೇ ತರಗತಿ ಉತ್ತೀರ್ಣರಾಗಿರಬೇಕು. 3. ಕಚೇರಿ ಮುಂಭಾಗದ ಸಹವರ್ತಿ (ಪ್ರಂಟ್ ಆಫೀಸ್ ಆಸೋಸಿಯೇಟ್) : ತರಬೇತಿಯ ಕಾಲಾವಧಿ 4 ತಿಂಗಳು ಹಾಗೂ ಪಿಯುಸಿ ಉತ್ತೀರ್ಣರಾಗಿರಬೇಕು. 4. ಬಹು ತಿನಿಸು ಕುಕ್ (ಮಲ್ಟಿ ಕ್ಯೂಸೆನ್ ಕುಕ್) : ತರಬೇತಿಯ ಕಾಲಾವಧಿ 5 ತಿಂಗಳು ಹಾಗೂ 8 ನೇ ತರಗತಿ ಉತ್ತೀರ್ಣರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ : ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದ ಲೋಟಸ್ ಮಹಲ್ ಬಳಿಯ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ದೂ.08394–295640 ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಡಿ.19 ರಂದು ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಕೆಲವೆಡೆ ಹೊಸ ವಿದ್ಯುತ್ ಪರಿವರ್ತಕ ಅಳವಡಿಸುವ ಕಾರ್ಯ ತುರ್ತಾಗಿ ಕೈಗೆತ್ತಿಗೊಳ್ಳುತ್ತಿರುವುರಿಂದ ಡಿ.19 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ 11 ಕೆ.ವಿ ಫೀಡರ್ ವ್ಯಾಪ್ತಿಯ ಎಫ್–01 ಮಾರ್ಗದ ಕಪ್ಪಗಲ್ಲು ರಸ್ತೆ, ಪಾರ್ವತಿ ನಗರ, ಬೀಚಿನಗರ, ತಾಳೂರು ರೋಡ್, ಭಗತ್‌ಸಿಂಗ್ ನಗರ, ಎಸಿ ಸ್ಟ್ರೀಟ್, ಬಾಲಾಜಿ ನರ್ಸಿಂಗ್ ಹೋಮ್, ಲಾ ಕಾಲೇಜು, ಮಹಾನಂದಿ ಕೊಟ್ಟಂ, ಮುಲ್ಲಂಗಿ ಲೇಔಟ್, ಕನಕದುರ್ಗ ಲೇಔಟ್. ಪಿಡಬ್ಲ್ಯುಡಿ ಕ್ವಾಟರ್ಸ್ ಸೇರಿದಂತೆ ಇನ್ನೂ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ಕಡಿತಗೊಳಿಸಲಾಗುತ್ತದೆ ಎಂದು ಜೆಸ್ಕಾಂನ ನಗರ ಉಪವಿಭಾಗ–2ರ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ

Advertise With Us
Reach Thousands of Potential Customers!
Contact for More information
M: 94486 33038

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1475/2024**

Between:- 1.Smt. Gowramma D/o late Eranna aged about 63 years, 2. Smt. Manjamma D/o late Eranna aged about 58 years, 3. Smt. Basamma D/o late Eranna, aged about 53 years, 4. Smt. Basamma W/o late K.Bhadrappa, aged about 54 years, 5. Smt. Kalamma wife of late K.Nagappa aged about 53years, 6. K.V.Manjunatha son of late K.Veerabhadrappa, aged about 33 years, 7.VShruthi D/o late K.Veerabhadrappa aged about 30 years, 8. V.Santhosha son of late K. Veerabhadrappa aged about 28 years,
All are Hindus, agriculturists, residents of T. Kallahalli village in Kudligi Taluk, Vijayanagara District. ……..Petitioners **And**
The Tahasildar, kudligi …….. Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased petitioners' No-1 to 3s' father, P-4 & 5's father-in-law, P- 6o 8's grandfather by Name Eeeranna S/o late Veerabhadrappa was died on 08.021965 at T.Kallahalli village, in Kudligi Taluk, and Vijayanagara District. On the file of the civil Judge & JMFC at Kudligi. The Tahasilar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 19/12/2024 at 11 A.M. and interested persons are directed to produce all the documents upon which you intended to rely in support of your defence.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 29/10/2024.

By Order of the court
Chief Ministerial Officer
Civil Judge (J.D) Court at Kudligi
**Sri. Govindareddy, Advocate, Kudligi**

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1451/2024**

Between:- 1. G.Ramappa s/o late Gurukar Moogappa aged about 37 years, 2. G.Obaiah S/o late Gurukar Moogappa aged about 32 years,
3. G.Palamma D/o Gurukar Moogappa aged about 30 years, 4. G.lakshmamma D/o late Gurukar Moogappa, aged about 28 years,
All are Hindus, agriculturists, residents of Sooladahalli village in Kudligi Taluk, Vijayanagara District. …….. Petitioners And
The Tahasildar, Kudligi …….. Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased petitioners' father by Name Gurukar Moogappa S/o late Obaiah was died on 01/08/1986 at Suldahalli village, in Kudligi Taluk, and Vijayanagara District. On the file of the civil Judge & JMFC at Kudligi. The Tahasilar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 19/12/2024 at 11 A.M. and interested persons are directed to produce all the documents upon which you intended to rely in support of your defence.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 24/10/2024.

By Order of the court
Chief Ministerial Officer
Civil Judge (J.D) Court at Kudligi
**Sri. Govindareddy, Advocate, Kudligi**

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1469/2024**

Between:- 1.Smt. Basamma Ekkegundi D/o late Channabasappa, aged about 80 years, 2. Smt. Gangamma D/o late Channabasappa, aged about 75 years, 3. Channappa.G S/o late Channabasapppa, aged about 70 years, 4. Gulappa S/o late Channabasappa, aged about 66 years, 5. Smt. Manjamma grandmother of late basavaraja aged about 45 years, 6. Kotresh. G.C. son of late Basavaraja aged about 30 years, 7. Mahanthesha G.C. son of late Basavaraja aged about 30 years, All are Hindus, agriculturists, residents of Ekkegundi village in Kudligi Taluk, Vijayanagara District.……..Petitioners **And**
The Tahasildar, kudligi …….. Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased petitioners' No-1 to 4s' mother, P-6 & 7's grandmother by Name Hanumakka W/o late Channabasappa was died on 30.01.2010 at Ekkegundi village, in Kudligi Taluk, and Vijayanagara District. On the file of the civil Judge & JMFC at Kudligi. The Tahasilar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 19/12/2024 at 11 A.M. and interested persons are directed to produce all the documents upon which you intended to rely in support of your defence.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 14/10/2024.

By Order of the court
Chief Ministerial Officer
Civil Judge (J.D) Court at Kudligi
**Sri. Govindareddy, Advocate, Kudligi**

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 640/2024**

Between:- 1. Smt. Chithamma W/o late Sanna Yarrappa, aged about 54 years, 2. Gragajara Siddesh S/o late Sanna Yarrappa, aged about 34 years, 3.Thammajja S/o late Sanna Yarrappa, aged about 32 years, 4. Balaraja S/o late Sanna Yarrappa, aged about 29 years, All are Hindus, agriculturists, residents of Shivapura Gollarahatti village in Kudligi Taluk, Vijayanagara District. ……. Petitioners **And**
The Tahasildar, kudligi …….. Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased petitioners' No-1s' husband, P-2 to 4's father by Name Sanna Yarrappa S/o late Garagappa was died on 17/07/1994 at Shivapura Gollarahatti village, in Kudligi Taluk, and Vijayanagara District. On the file of the civil Judge & JMFC at Kudligi. The Tahasilar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 19/12/2024 at 11 A.M. and interested persons are directed to produce all the documents upon which you intended to rely in support of your defence. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 14/10/2024.

By Order of the court
Chief Ministerial Officer
Civil Judge (J.D) Court at Kudligi
**Sri. D.K.B.Raj , Advocate, Kudligi**

Advertisements

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038